ಶಾಸನ ರಚನಾ ಕಾರ್ಯಕಲಾಪಗಳು

೧೯೮೫ನೇ ಇಸವಿಯ ಕರ್ನಾಟಕ ಸಾರ್ವಜನಿಕ ಹಣಕಾಸು (ಬಾಕಿಗಳ ವಸೂಲಾತಿ) (ತಿದ್ದುಪಡಿ) ವಿಧೇಯಕ

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ೧೯೮೫ನೇ ಇಸವಿಯ ಕರ್ನಾಟಕ ಸಾರ್ವಜನಿಕ ಹಣಕಾಸು (ಬಾಕಿಗಳ ವಸೂಲಾತಿ) (ತಿದ್ದುಪಡಿ) ವಿಧೇಯಕವನ್ನು, ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ.

೧೯೮೫ನೇ ಇಸವಿಯ ಕರ್ನಾಟಕ ಸಾರ್ವಜನಿಕ ಹಣಕಾಸು (ಬಾಕಿಗಳ ವಸೂಲಾತಿ) (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ೧೯೮೫ನೇ ಇಸವಿಯ ಕರ್ನಾಟಕ ಸಾರ್ವಜನಿಕ ಹಣಕಾಸು (ಬಾಕಿಗಳ ವಸೂಲಾತಿ) (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

* ಅಧ್ಯಕ್ಷರು.—ವಿಧೇಯಕವನ್ನು ಮಂಡಿಸಲಾಗಿದೆ.

ನಿಯಂವು ೫೯ರ ಮೇರೆಗೆ ನಿಲುವಳಿಸೂಚನೆ.

ಕರ್ನಾಟಕ ರಾಜ್ಯದಲ್ಲಿ ತಾಲ್ಲೂಕ್ ಸಲಹಾ ಸಮಿತಿಗಳನ್ನು ರಚನೆ ಮಾಡಿರುವ ಬಗ್ಗೆ.

ಶ್ರೀ ಎಸ್. ಬಂಗಾರಪ್ಪ (ವಿರೋಧ ಪಕ್ಷದ ನಾಯಕರು).—ಮಾನ್ಯ ಅಧ್ಯಕ್ಷರೇ, ನಿಯಮ ೫೯ರ ಪ್ರಕಾರ ನಾವು ತಮಗೆ ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿಕೊಟ್ಟಿದ್ದೇವೆ. ಇದಕ್ಕೆ ಕಾರಣ ವೇನೆಂದರೆ, ಸರ್ಕಾರದವರು ಕರ್ನಾಟಕ ರಾಜ್ಯದಲ್ಲಿರುವಂತಹ ಎಲ್ಲ ತಾಲ್ಲೂಕುಗಳಿಗೂ ಸಲಹಾ ಸಮಿತಿ ಗಳನ್ನು ರಚನೆ ಮಾಡುತ್ತಿದೆ. ಈ ಹಿಂದೆ ತಾಲ್ಲೂಕ್ ಅಭಿವೃದ್ಧಿ ಮಂಡಲಿ ಸದಸ್ಯರುಗಳು ಏನಿರು ತ್ತಿದ್ದರು, ಆ ಒಂದು ಜಾಗದಲ್ಲಿ ಈಗ ಸಲಹಾ ಸಮಿತಿಗಳನ್ನು ನೇಮಕ ಮಾಡುತ್ತಿದ್ದಾರೆ. ಇದೇ ವಿಚಾರ ಕಳೆದ ಮಾರ್ಚ ತಿಂಗಳಲ್ಲಿ ಇಲ್ಲಿ ಪ್ರಸ್ತಾಪಕ್ಕೆ ಬಂದಾಗ ಸರ್ಕಾರದವರು ಸಮಿತಿಗಳನ್ನು ನೇಮಕ ಮಾಡುವಾಗ ಸಾಕಷ್ಟು ಪ್ರಾತಿನಿಧ್ಯ ಕೊಡುವುದಾಗಿ ಹೇಳಿದ್ದರು. ಆದರೆ ಆ ಸಮಯದಲ್ಲಿ ಕರ್ನಾಟಕ ರಾಜ್ಯ ಮಂಡಲ್ ಪಂಚಾಯತ್ ಮತ್ತು ಜಿಲ್ಲಾ ಪರಿಷತ್ ಮಂಸೂದೆಗೆ ರಾಷ್ಟ್ರಪತಿಯವರ ಅಂಗೀಕಾರ ಇನ್ನೂ ದೊರಕಿರಲಿಲ್ಲ. ಈ ಕಾರಣದಿಂದ ಸಲಹಾ ಸಮಿತಿಗಳನ್ನು ನೇಮಕ ಮಾಡುವಲ್ಲಿ ನಮ್ಮ ಅಭ್ಯಂತರವೇನೂ ಇಲ್ಲಹೆಂದು ನಾವು ತಿಳಿಸಿದ್ದೆವು. ಆದರೆ ಈಗ ಈ ಮಸೂದೆಗೆ ರಾಷ್ಟ್ರಪತಿ ಯವರ ಅಂಗೀಕಾರ ದೊರಕಿದೆ. ಆದ್ದರಿಂದ ಈಗ ಸರ್ಕಾರಕ್ಕೆ ಇರುವ ಒಂದೇ ಒಂದು ದಾರಿ ಎಂದರೆ, ಮಂಡಲ್ ಪಂಚಾಯತ್ ಹಾಗೂ ಜಿಲ್ಲಾ ಪರಿಷತ್‌ಗಳಿಗೆ ಚುನಾವಣೆ ನಡೆಸಲು ದಿನಾಂಕವನ್ನು ಗೊತ್ತ ಮಾಡಿ ಅದಕ್ಕೆ ಎಲ್ಲ ಸಿದ್ಧತೆಗಳನ್ನು ಮಾಡಿಕೊಳ್ಳುವುದು. ಇದಕ್ಕಾಗಿ ಕ್ಷೇತ್ರಗಳ ಪುನರ್ ವಿಂಗಡಣೆ ಕೆಲಸ ಮಾಡಬೇಕಾಗುತ್ತದೆ. ಈ ಕೆಲಸ ಮಾಡುವಾಗಲೂ ಸಹ ವಿರೋಧ ಪಕ್ಷಗಳ ಸಲಹೆಗಳನ್ನು ಪಡೆದುಕೊಳ್ಳಬೇಕೆಂದು ನಾವು ಈ ಹಿಂದೆಯೇ ಸರ್ಕಾರಕ್ಕೆ ಸಲಹೆ ಮಾಡಿದ್ದೆವು. ನಮ್ಮ ಸಲಹೆಗಳನ್ನು ಸರ್ಕಾರದವರು ಒಪ್ಪಿಕೊಂಡು ವಿರೋಧ ಪಕ್ಷಗಳ ಅಭಿಪ್ರಾಯ ಪಡೆದುಕೊಂಡೇ ಈ ಕೆಲಸ ಮಾಡುವು ದಾಗಿ ಈ ಸದನದಲ್ಲಿ ಹೇಳಿದ್ದರು. ಆದರೆ ಈಗಿನ ಪರಿಸ್ಥಿತಿಯನ್ನು ನೋಡಿದರೆ ಈ ಕ್ಷೇತ್ರಗಳ ಪುನರ್ ವಿಂಗಡಣೆಯ ಬಗ್ಗೆ ಎಲ್ಲಾ ವಿರೋಧ ಪಕ್ಷಗಳ ಸಲಹೆಗಳನ್ನು ಪಡೆದುಕೊಳ್ಳದೆ ಏಕಪಕ್ಷೀಯವಾಗಿ ಮಾಡುತ್ತಿರುವುದು ನಮಗೆ ಕಂಡುಬಂದಿದೆ ಇದರ ಜೊತೆಗೆ, ಈ ಮಂಸೂದೆಗೆ ರಾಷ್ಟ್ರಪತಿಯವರ ಅಂಗೀಕಾರ ದೊರಕಿರುವುದರಿಂದ ಸಲಹಾ ಸಮಿತಿಗಳ ಅಗತ್ಯವಾದರೂ ಏನು ಎಂಬ ಪ್ರಶ್ನೆಯೂ ಸಹ

* Annexure.

ಬರುತ್ತಿದೆ ? ರಾಷ್ಟ್ರಪತಿಯವರ ಅಂಗೀಕಾರ ದೊರಕಿಸುವುದಕ್ಕೆ ಮೊದಲು ಈ ಸಲಹಾ ಸಮಿತಿಗಳನ್ನು ರಚನೆ ಮಾಡುವುದರಲ್ಲಿ ಅರ್ಥವಿತ್ತು. ಆದರೆ ಈಗ ಏತಕ್ಕೆ ಬೇಕು ? ಆದರೂ ಸರ್ಕಾರದವರು ಸುಮಾರು ೫೦-೫೬ ತಾಲ್ಲೂಕ್‌ಗಳಿಗೆ ಸಲಹಾ ಸಮಿತಿಗಳನ್ನು ರಚನೆ ಮಾಡಿದ್ದಾರೆಂಬ ವರದಿ ನಮಗೆ ಬಂದಿದೆ. ಈ ಸಮಿತಿಗಳಲ್ಲಿ ಮೂರು ನಾಲ್ಕು ಕಡೆಗಳಲ್ಲಿ ಮಾತ್ರ ವಿರೋಧಪಕ್ಷದವರಿಗೆ ಪ್ರಾತಿನಿಧ್ಯ ಕೊಟ್ಟಿದ್ದಾರೆ. ಆದರೆ ಇನ್ನುಳಿದ ಕಡೆಗಳಲ್ಲಿ ವಿರೋಧಪಕ್ಷದವರಿಗೆ ಸೂಕ್ತ ಪ್ರಾತಿನಿಧ್ಯ ಕೊಟ್ಟಿಲ್ಲ ವೆಂಬುದು ಈ ಪಟ್ಟಿಯನ್ನು ನೋಡಿದರೆ ತಿಳಿದುಬರುತ್ತದೆ. ಈ ಬಗ್ಗೆ ಬೇರೆ ರಾಜಕೀಯ ಪಕ್ಷಗಳನ್ನು ತುಚ್ಛೀಕಾರದಿಂದ ನೋಡುತ್ತಿದ್ದಾರೆ. ಈ ಸದನಕ್ಕೆ ಕೊಟ್ಟ ಮಾತನ್ನು ಕಡೆಗಣಿಸಿದ್ದಾರೆ. ಏಕಪಕ್ಷೀಯ ವಾಗಿ ತಮ್ಮ ಪಕ್ಷದ ಸದಸ್ಯರನ್ನೇ ಈ ಸಮಿತಿಗಳಿಗೆ ಹಾಕಿದ್ದಾರೆ. ಅಭಿವೃದ್ಧಿ ಕಾರ್ಯಕ್ರಮಗಳಿಗೆ ಹಾಗೂ ಪ್ರಗತಿಪರ ಕಾರ್ಯಕ್ರಮಗಳಿಗೆ ಹಣ ಮಂಜೂರು ಮಾಡುವ ಬಗ್ಗೆ, ಬರಗಾಲದ ಬಗ್ಗೆ ಹಣ ವಿಚಾರ ಮಾಡುವ ಬಗ್ಗೆ ರಾಜಕೀಯ ಮಾಡಲು ಅನುಕೂಲವಾಗುವಂತಹ ಸಮಿತಿಗಳನ್ನು ರಚನೆ ಮಾಡಿದ್ದಾರೆ. ಕೆಲವು ಕ್ಷೇತ್ರಗಳಲ್ಲಿ ವಿರೋಧಪಕ್ಷದ ಶಾಸಕರು ಇಲ್ಲದಿರಬಹುದು. ಆದರೆ ವಿರೋಧ ಪಕ್ಷದ ಶಾಸಕರುಗಳು ಇರುವ ಕಡೆಗಳಲ್ಲಿಯೂ ಸಹ, ಅವರ ಅಭಿಪ್ರಾಯ ಕೇಳದೆ ಏಕಪಕ್ಷೀಯವಾಗಿ ಈ ಸಮಿತಿಗಳನ್ನು ನೇಮಕ ಮಾಡಿದ್ದಾರೆ. ಇಂತಹ ಸಮಿತಿಗಳಿಂದ ಆಡಳಿತ ಪಕ್ಷದ ಹಿತವನ್ನು ರಕ್ಷಣೆ ಮಾಡಿದಂತೆ ಆಗುತ್ತದೆಯೇ ಹೊರತು ಎಲ್ಲ ಪಕ್ಷಗಳನ್ನೂ ನಂಬಿಕೆಗೆ ತೆಗೆದುಕೊಂಡಂತೆ ಆಗುವುದಿಲ್ಲ. ಈ ಒಂದು ಅನುಮಾನ ಸರ್ಕಾರದವರು ಹೊರಡಿಸಿರುವ ಈ ಪಟ್ಟಿಯನ್ನು ನೋಡಿದಾಗ ಯಾರಿಗಾದರೂ ಬರುತ್ತದೆ. ಇನ್ನುಳಿದಿರುವ ತಾಲ್ಲೂಕ್‌ಗಳಿಗೂ ಸಲಹಾ ಸಮಿತಿಗಳನ್ನು ನೇಮಕ ಮಾಡುವ ಒಂದು ಪ್ರಯತ್ನ ನಡೆದಿದೆ. ಅಲ್ಲಿಯೂ ಸಹ ತಮ್ಮ ಪಕ್ಷದವರನ್ನೇ ನೇಮಕ ಮಾಡುವ ಸಂಭವವಿದೆ. ಈ ರೀತಿ ಇವರು ಸಮಿತಿಗಳನ್ನು ರಚನೆ ಮಾಡುವುದರ ಮೂಲಕ ವಿರೋಧಪಕ್ಷದವರ ಕ್ಷೇತ್ರಗಳಲ್ಲಿ ಯಾವ ರೀತಿ ಪಕ್ಷ ರಾಜಕೀಯ ಮಾಡುತ್ತಿದ್ದಾರೆಂಬುದನ್ನು ನಾವು ಇಲ್ಲಿ ಚರ್ಚೆ ಮಾಡಬೇಕಾಗಿದೆ ಇದು ಬಹಳ ಪ್ರಾಮುಖ್ಯವಾದಂಥ ವಿಚಾರವಾಗಿದೆ. ಇತ್ತೀಚೆಗೆ ಇವರು ತೆಗೆದುಕೊಂಡಿರುವ ನಿರ್ಣಯವನ್ನು ನೋಡಿದಾಗ ಇವರು ಯಾವ ದಾರಿಯಲ್ಲಿ ಹೋಗುತ್ತಿದ್ದಾರೆಂಬುದು ತಿಳಿದುಬರುತ್ತದೆ. ನಾಲ್ಕೈದು ದಿವಸಗಳ ಹಿಂದೆ ಇವರು ಏನೊಂದು ಆಜ್ಞೆಯನ್ನು ಈ ಬಗ್ಗೆ ಹೊರಡಿಸಿದ್ದಾರೆ, ಅದು ಏಕಪಕ್ಷೀಯ ವಾಗಿದೆ. ಮತ್ತು ಈ ಸದನಕ್ಕೆ ಇವರು ಹಿಂದೆ ಏನು ಮಾತು ಕೊಟ್ಟಿದ್ದರು, ಅದಕ್ಕೆ ತದ್ವಿರುದ್ಧ ವಾದಂಥ ವಿಚಾರವಾಗಿದೆ. ಸರ್ಕಾರ ಇಲ್ಲಿ ಕೊಟ್ಟಿರತಕ್ಕಂತಹ ಮಾತುಗಳನ್ನು ಮುರಿದಿದೆ. ಆಗತಕ್ಕಂತಹ ಅನ್ಯಾಯಗಳನ್ನು ತಡೆಹಿಡಿಯತಕ್ಕಂತಹ ವಿಚಾರ ಇದು. ಈ ನಿಲುವಳಿ ಸೂಚನೆಗೆ ಸಂಬಂಧಪಟ್ಟಂತೆ, ನಾವು ಸಮಿತಿಗಳ ಪಟ್ಟಿಯನ್ನು ತೆಗೆದುಕೊಂಡು ನೋಡಿದರೆ ಅದರಲ್ಲಿ ಯಾರ್ಯಾರಿದ್ದಾರೆ, ಯಾವ್ಯಾವ ಪಕ್ಷದವರು ಎಷ್ಟು ಸಂಖ್ಯೆಯಲ್ಲಿದ್ದಾರೆ ಸಿ.ಪಿ.ಐ., ಸಿ.ಪಿ.ಎಂ., ಬಿ.ಜೆ.ಪಿ., ಪಕ್ಷದ ಸದಸ್ಯರು ಹಾಗೂ ಎಲ್ಲ ಪಕ್ಷದ ಸದಸ್ಯರೂ ಎಷ್ಟು ಜನರಿದ್ದಾರೆ ಎಂಬುದು ಗೊತ್ತಾಗುತ್ತದೆ. ಸರ್ಕಾರ ಇದರ ಬಗ್ಗೆ ಮೂರನೇ ಒಂದು ಭಾಗ ಅಥವಾ ಅರ್ಧ ಭಾಗದಷ್ಟು ಕಾರ್ಯಕ್ರಮವನ್ನು ಮಾಡಿರಬಹುದು ಇದು ಅತಿ ಶೀಘ್ರವಾದ ಮತ್ತು ಅತಿ ಜರೂರಾದ ವಿಚಾರವಾಗಿದೆ. ಇದಕ್ಕಿಂತ ಪ್ರಮುಖವಾದ ವಿಚಾರ ಬೇಕೊಂದು ಇಲ್ಲವೆಂದು ನಾನು ಹೇಳುವುದಿಲ್ಲ. ಇವತ್ತು ಎಜುಕೇಷನ್ ಬಗ್ಗೆ ಇಲ್ಲಿ ಚರ್ಚೆ ಇದೆ. ಅದೂ ಕೂಡ ಬಹಳ ಮುಖ್ಯವಾಗಿದೆ. ಇದರ ಬಗ್ಗೆ ಮೇಲ್ಮನೆಯಲ್ಲೂ ಕೂಡ ಸಾಕಷ್ಟು ಚರ್ಚೆಯಾಗಿದೆ, ನಾವೂ ಕೂಡ ವಿಚಾರ ಮಾಡಿ, ಒಟ್ಟಿಗೆ ಎಲ್ಲರೂ ಸಹಿ ಹಾಕಿ ಈ ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇವೆ, ಆದುದರಿಂದ ತಾವು ದಯವಿಟ್ಟು ಈ ವಿಷಯದ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಸಣ್ಣ ನೀರಾವರಿ ಮತ್ತು ಶಾಸನಬದ್ಧ ಅಭಿವೃದ್ಧಿ ಸಂಸ್ಥೆಗಳ ಸಚಿವರು).—ಇದು ನಿಲುವಳಿ ಸೂಚನೆಗೆ ಬರತಕ್ಕಂತಹ ವಿಷಯ ಅಲ್ಲ. ನಾನು ಇದರ ಮೇಲೆ ಪಾಯಿಂಟ್ ಮೇಲೆ ಏನೂ ಹೇಳುವುದಿಲ್ಲ. ಅಧಿನಿಯಮ ೫೯ರ ಪ್ರಕಾರ ಈ ವಿಷಯವನ್ನು ಇಲ್ಲಿ ತೆಗೆದುಕೊಂಡು ಸಭೆಯ ಬೇರೆ ಕಾರ್ಯಕಲಾಪಗಳನ್ನು ಬದಿಗೊತ್ತಿ, ಇದನ್ನು ಚರ್ಚೆಗೆ ತೆಗೆದುಕೊಳ್ಳುವುದು ಸರಿಯಾದುದಲ್ಲ. ನಾನು ಆ ವಿಧಿಯನ್ನು ಇಲ್ಲಿ ಓದಿ ಹೇಳಬೇಕಾದಂತಹ ಪ್ರಮೇಯ ಇಲ್ಲವೆಂದು ನಾನು ಭಾವಿಸಿದ್ದೇನೆ. ಮಾನ್ಯ ವಿರೋಧಪಕ್ಷದ ನಾಯಕರು ಈ ವಿಷಯವನ್ನು ಬೇರೆ ರೂಪದಲ್ಲಿ, ಪ್ರಸ್ತಾಪ ಮಾಡಿದರೆ, ಇದರ ಬಗ್ಗೆ ಸರ್ಕಾರ ತನ್ನ ನಿಲುವು ಏನು ಎಂಬುದನ್ನು ಹೇಳುವುದಕ್ಕೆ ಅವಕಾಶವಿದೆ. ಆ ರೀತಿ ಪ್ರಸ್ತಾಪ ಮಾಡುವುದಕ್ಕೆ ಅಧಿನಿಯಮಗಳ ಮೇರೆಗೆ ಅವಕಾಶವಿದೆ. ಇದನ್ನು ನಾನು ಲಂಬಿಸದೆ,

ಇದರ ಬಗ್ಗೆ ನನ್ನ ಮೂಲಭೂತವಾದಂತಹ ಕ್ರಿಯಾಲೋಪ ಏನೆಂದರೆ, ಇದು ಅಡ್ಜರ್ನ್‌ಮೆಂಟ್ ಮೋಷನ್‌ಗೆ ಬರತಕ್ಕಂತಹ ವಿಷಯ ಅಲ್ಲ. ಅದರಲ್ಲಿ ಸೂಚಿಸಿರತಕ್ಕಂತಹ ಕಾಲಂಗಳೇನಿದೆ. ಅದರ ಪ್ರಕಾರ ಈ ವಿಷಯವನ್ನು ಈ ದಿವಸ ಚರ್ಚೆ ಮಾಡುವುದು ಸರಿಯಾದುದಲ್ಲವೆಂದು ತಿಳಿಸುತ್ತೇನೆ. ಆದುದರಿಂದ ಇದನ್ನು ತಳ್ಳಿ ಹಾಕಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಅಬ್ದುಲ್ ನಜೀರ್ ಸಾಬ್ (ಸಣ್ಣಾನ್ಯ ಗ್ರಾಮಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು).—ಮಾನ್ಯ ಸಭಾಧ್ಯಕ್ಷರೇ, ಈ ವಿಷಯ ನಿಲುವಳಿ ಸೂಚನೆಯ ಗುಣ ಲಕ್ಷಣಗಳನ್ನು ಪಡೆದಿದೆಯೇ ಇಲ್ಲವೇ ಎನ್ನುವುದನ್ನು ನನ್ನ ಸಹೋದ್ಯೋಗಿಗಳು ಹೇಳಿದ್ದಾರೆ. ಈ ವಿಷಯ ಮೇಲ್ಮನೆಯಲ್ಲಿ ಬಂದಾಗ ಹೇಳಿದ್ದೇನೆ. ಈ ಸಮಸ್ಯೆಯ ಬಗ್ಗೆ ವಿರೋಧ ಪಕ್ಷದ ನಾಯಕರು ಮತ್ತು ಕೆಳಮನೆಯಂತು ಮೇಲ್ಮನೆಯ ಎಲ್ಲಾ ಪಕ್ಷದ ಸದಸ್ಯರು ಮತ್ತು ಮಾನ್ಯ ಮುಖ್ಯಮಂತ್ರಿಗಳೂ ಕೂತು ಇದರ ಬಗ್ಗೆ ಚರ್ಚೆ ಮಾಡೋಣ. ಇದರ ಬಗ್ಗೆ ನಿಲುವಳಿ ಸೂಚನೆ ತೆಗೆದುಕೊಳ್ಳುವುದು ಬೇಡ. ಇದನ್ನು ಸದುದ್ದೇಶದಿಂದ ಮಾಡಿದ್ದೇವೆ. ಸರ್ಕಾರವನ್ನು ನಡೆಸುವಾಗ, ಕೆಲವು ಸಮಿತಿಗಳನ್ನು ಮಾಡುವುದಿದೆ. ಅನೇಕ ಸಮಿತಿಗಳನ್ನು ಮಾಡಿದ್ದೇವೆ. ಇದನ್ನೂ ಕೂಡ ಒಂದು ಸಮಿತಿ ಎಂದು ಮಾಡಿದ್ದೇವೆ. ಇದಕ್ಕೆ ರಾಷ್ಟ್ರಪತಿಗಳ ಅಂಗೀಕಾರ ಸಿಕ್ಕಬಹುದೆಂದು ಇದನ್ನು ಮಾಡಿದ್ದೇವೆ ಇದನ್ನು ಮಾಡುವಂತಹ ಸಂದರ್ಭದಲ್ಲಿ ಪಾರ್ಲಿಮೆಂಟ್ ಚುನಾವಣೆ ಬಂತು. ನಂತರ ನಾವು ಮತ್ತೆ ಅಧಿಕಾರಕ್ಕೆ ಬಂದ ಮೇಲೆ ಮಾಡಿದ್ದೇವೆ. ಇದರಲ್ಲಿ ವಿರೋಧ ಪಕ್ಷದವರನ್ನು ಕಡೆಗಣಿಸಬೇಕೆಂಬ ಉದ್ದೇಶವಿರಲಿಲ್ಲ. ವಿರೋಧ ಪಕ್ಷದ ನಾಯಕರಿಗೂ, ಅವರ ಸಚೇತಕರಿಗೂ ಪತ್ರ ಬರೆದು, ಅವರ ಸಲಹೆಗಳನ್ನು ಕೇಳಿದ್ದೇವೆ. ಸುಮಾರು ೫೦-೬೦ ಸಮಿತಿಗಳನ್ನು ಮಾಡಿದ್ದೇವೆ. ಗಡಿ ವಿಂಗಡಣೆಗೂ ಇದಕ್ಕೂ ಯಾವ ಸಂಬಂಧವೂ ಇಲ್ಲ. ಮಾನ್ಯ ಮುಖ್ಯ ಮಂತ್ರಿಗಳು, ನಾವೂ, ನೀವೂ ಕೂತು ಚರ್ಚೆ ಮಾಡೋಣ. ನಿಮ್ಮ ಅಭಿಪ್ರಾಯವನ್ನು ತೆಗೆದುಕೊಂಡು ಮುಂದೆ ಯಾವ ರೀತಿ ಮಾಡಬೇಕೋ. ಅದನ್ನು ಮಾಡೋಣ. ಇದಕ್ಕೆ ರಾಷ್ಟ್ರಪತಿಯವರ ಒಪ್ಪಿಗೆ ದೊರೆತದ್ದು ೧೦ನೇ ತಾರೀಖು ಆದರೆ ಅದು ನಮಗೆ ಬಂದದ್ದು, ೨೮-೨೯ನೇ ತಾರೀಖಿನಂದು. ೩೦ನೇ ತಾರೀಖಿನಂದು ಗೆಜೆಟ್ ನೋಟಿಫಿಕೇಷನ್ ಮಾಡಿದ್ದೇವೆ. ಈ ಸಮಿತಿಗಳು ಜೂನ್ ತಿಂಗಳಲ್ಲಿ ಆದಂತಹವುಗಳು. ಇದರ ಬಗ್ಗೆ, ಮೇಲ್ಮನೆಯಲ್ಲಿ ಹೇಳಿರುವಂತೆ, ಮಾನ್ಯ ಮುಖ್ಯ ಮಂತ್ರಿಗಳು, ನಾವೂ ನೀವೂ ಕೂತು ಚರ್ಚೆ ಮಾಡಿ ಒಂದು ಅಭಿಪ್ರಾಯಕ್ಕೆ ಬಂದು, ಅದನ್ನು ಯಾವ ರೀತಿ ಮಾಡಬೇಕೋ ಹಾಗೆ ಮಾಡೋಣ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಸಭಾಧ್ಯಕ್ಷರೆ, ತಾವು ನಿಲುವಳಿ ಸೂಚನೆಯನ್ನು ಸ್ವೀಕಾರ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇದರಲ್ಲಿ ಕೆಲವು ಮೂಲಭೂತವಾದಂತಹ ಪ್ರಶ್ನೆಗಳಿವೆ. ತಮಗೆ ಗೊತ್ತಿರಬಹುದು, ಹಿಂದೆ ಅನೇಕ ಸಮಿತಿಗಳನ್ನು ಆಳುವ ಪಕ್ಷದವರು ರಚನೆ ಮಾಡಿದ್ದಾರೆ. ಈಗಲೂ ಅಡ್ವೈಜರಿ ಕಮಿಟಿ, ಕಾರ್ಪೊರೇಷನ್ ಎಂದು ಅನೇಕ ಸಮಿತಿಗಳನ್ನು ಮಾಡಿದ್ದಾರೆ. ಆ ಬಗ್ಗೆ ನಿಲುವಳಿ ಸೂಚನೆಯನ್ನು ಈ ಸಭೆಯ ಮುಂದೆ ತರಲಿಲ್ಲ. ಸರ್ಕಾರ ಅಧಿಕಾರದಲ್ಲಿ ಇರುವಾಗ ಸಚಿವರು ಹೇಳಿದ ಪ್ರಕಾರ, ಒಂದು ಸಲಹಾ ಸಮಿತಿಯನ್ನು ಮಾಡುತ್ತಾರೆ. ಅದು ಆಳುವ ಪಕ್ಷವಾದುದರಿಂದ, ಅವರು ತಮ್ಮ ಅಧಿಕಾರವನ್ನು ಉಪಯೋಗ ಮಾಡಿಕೊಂಡು ಸಮಿತಿಗಳನ್ನು ಮಾಡುತ್ತಾರೆ. ಕಾರ್ಪೊರೇಷನ್, ಸಲಹಾ ಸಮಿತಿಗಳು ಅಥವಾ ಲ್ಯಾಂಡ್ ಟ್ರಿಬ್ಯುನಲ್‌ಗಳನ್ನು ಮತ್ತು ಇನ್ನು ಮುಂತಾದ ಸಮಿತಿಯನ್ನು ಏಕಪಕ್ಷೀಯವಾಗಿ ಮಾಡಿದ್ದಾರೆ. ಅಧಿಕಾರದಲ್ಲಿ ಇರುವಾಗ ಒಂದು ರೀತಿಯಲ್ಲಿ ವಿರೋಧ ಪಕ್ಷದಲ್ಲಿರುವಾಗ ಒಂದು ರೀತಿಯಲ್ಲಿ ಮಾಡುವುದು ವಿತಂಡವಾದ. ಅದೇನೂ ಹೊಸದಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ನಿಮ್ಮದು...

ಶ್ರೀ ಎಂ. ವೀರಪ್ಪ ಮೊಯಿಲಿ.—ಇದರಲ್ಲಿ ನಿಮ್ಮದಾಗಲೀ, ನಮ್ಮದಾಗಲೀ, ವ್ಯತ್ಯಾಸವಿಲ್ಲ. ಹಿಂದೆ ಲ್ಯಾಂಡ್ ಟ್ರಿಬ್ಯುನಲ್ ರಚನೆಯಾದಾಗ, ಶ್ರೀಮಾನ್ ದೇವರಾಜ್ ಅರಸ್‌ರವರು ಮುಖ್ಯ ಮಂತ್ರಿಯಾಗಿದ್ದರು. ಆಗ ನಮ್ಮ ಅವ್ಯನವರು ಆ ಸ್ಥಾನದಲ್ಲಿದ್ದರು. ಆಗ ಲ್ಯಾಂಡ್ ಟ್ರಿಬ್ಯುನಲ್ ವಿಷಯದಲ್ಲಿ ಧರಣಿ ಆಯಿತಂ.

ಶ್ರೀ ರಾಮಕೃಷ್ಣ ಹೆಗಡೆ.—ಆ ಮತದಾರ ಕ್ಷೇತ್ರದ ಶಾಸಕರನ್ನು ಲ್ಯಾಂಡ್ ಟ್ರಿಬ್ಯುನಲ್‌ಗೆ ನೇಮಕ ಮಾಡಲಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಬೊಮ್ಮಾಯಿಯವರು ಶಾಸಕರಾಗಿದ್ದರು ಆಗ ಅವರು ಕೂಡ ಸದಸ್ಯರಾಗಿದ್ದರು. ಬೇರೆ ಕಡೆಗಳಿಗೆ ನಮ್ಮ ಸದಸ್ಯರನ್ನು ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡಿ ಧರಣಿ ನಡೆಯಿತು. ಆಗ ಅದಕ್ಕೂ ಕೂಡ ಒಪ್ಪಿಗೆ ಕೊಟ್ಟು ವಿರೋಧ ಪಕ್ಷದ ಶಾಸಕರು ಹೆಚ್ಚು ಇದ್ದಲ್ಲಿ ಹೆಚ್ಚು ಕೊಟ್ಟಿದ್ದೇವೆ. ಅದು ಮಾತ್ರವಲ್ಲ. ಬೇರೆ ಕಡೆಗಳಲ್ಲೂ ಕೂಡ ಹೆಚ್ಚಿಗೇನೆ ಕೊಟ್ಟಿದ್ದೇವೆ. ಲ್ಯಾಂಡ್ ಟ್ರಿಬ್ಯೂನಲ್‌ನಲ್ಲಿ ಪ್ರತಿನಿಧಿಗಳನ್ನಾಗಿ ಮಾಡಿದ್ದೇವೆ. ರೆಕ್ರೂಟ್‌ಮೆಂಟ್ ಕಮಿಟಿಯಲ್ಲಿ ಕೂಡ ಕೊಟ್ಟಿದ್ದೇವೆ. ಇಲ್ಲಿ ಏಕ ಪಕ್ಷೀಯವಾಗಿ ಮಾಡಿದ್ದಾರೆ. ಪ್ರಜಾಪ್ರಭುತ್ವದ ನಿಲುವನ್ನು ಬುಡಮೇಲು ಮಾಡಿದ್ದೀರಿ. ಮಾನ್ಯ ಲಕ್ಷ್ಮೇಸಾಗರ್, ಮಾನ್ಯ ಬೊಮ್ಮಾಯಿ ಮತ್ತು ಮಾನ್ಯ ದೇವೇಗೌಡರವರು ವಾದ ಮಾಡಿದ್ದೂ ಮಾಡಿದ್ದೆ. ಈಗ ಆ ವಾದ ಎಲ್ಲ ಕಾವೇರಿ ನೀರು ಬಂದು ಹೊರಟು ಹೋಯಿತೆ ?

ಈಗ ಆದರ ಮೂಲ ಹುಡುಕಲಿಕ್ಕೆ ಆಗಿಲ್ಲ. ಟ್ರಿಬ್ಯೂನಲ್ ಮಾಡಿದ್ದಾರೆ, ರೆಕ್ರೂಟ್‌ಮೆಂಟ್ ಕಮಿಟಿಗಳನ್ನು ಮಾಡಿದ್ದಾರೆ, ಸಾಕಷ್ಟು ಸಲಹಾ ಸಮಿತಿಗಳನ್ನು ಮಾಡಿದ್ದಾರೆ, ಇದನ್ನೆಲ್ಲಾ ಏಕ ಪಕ್ಷವಾಗಿ ಮಾಡಿದ್ದಾರೆ. ಏಕೆಂದರೆ ಪ್ರಜಾಪ್ರಭುತ್ವದ ಒಂದು ಡೆಫಿನಿಷನ್ ಮೌಲ್ಯಾಧಾರ. ಇದು ಬಹಳ ದೊಡ್ಡ ಸಂಗತಿಯಾಯಿತು. ಮೌಲ್ಯಾಧಾರ ಬಹಳಷ್ಟು ಕ್ಯಾನ್ಸರ್ ಆಗಿ ಹೆಚ್ಚಿದೆ ಕ್ಯಾನ್ಸರ್ ಗ್ರೂಪ್ ಇವರ ಪಕ್ಷದಲ್ಲಿ ಇದೆ.

ಶ್ರೀ ರಾಮಕೃಷ್ಣ ಹೆಗಡೆ.—ಇದೆಲ್ಲಾ ನಿಮಗೆ ಹೇಗೆ ಅರ್ಥವಾಗಬೇಕು ?

ಶ್ರೀ ಎಂ. ವೀರಪ್ಪ ಮೊಯಿಲಿ.—ಅಧ್ಯಕ್ಷರೇ, ಈಗ ಇದು ಆಧಾರವಿಲ್ಲದ ಮೌಲ್ಯ, ಮೌಲ್ಯ ಧಾರ ಆದರ ವ್ಯಾಖ್ಯಾನ ಮಾಡಲಿಕ್ಕೆ ಸಾಕಷ್ಟು ಸಮಯವಿಲ್ಲ. ಪ್ರಸ್ತಾವಿಕವಾಗಿ ಈ ನಿಲುವಳಿ ಸೂಚನೆಯನ್ನು ನಾನು ಪ್ರಸ್ತಾಪ ಮಾಡಬೇಕಾಗಿದೆ. ಆದ್ದರಿಂದ ನನ್ನ ಕ್ಷೇತ್ರ ಈ ವಿಷಯಕ್ಕೆ ಮಾತ್ರ ಸೀಮಿತವಾಗಿದೆ. ಇಲ್ಲಿಯೇ ಇದ್ದರೇ, ತಾವು ನನ್ನನ್ನು ಇದಕ್ಕೆ ಸೀಮಿತಗೊಳಿಸಿ ಎಂದು ಹೇಳುವ ಮೊದಲು ನಾನು ನನ್ನ ದಾರಿಯಲ್ಲೇ ಹೋಗುವುದು ಒಳ್ಳೆಯದು ಎಂದು ನನಗನ್ನಿಸುತ್ತದೆ. ಆದ್ದರಿಂದ ಇವತ್ತು ನಾವು ನಿಲುವಳಿ ಸೂಚನೆಯನ್ನು ಸಾಮಾನ್ಯವಾಗಿ ತಂದಿದ್ದೇವೆ ಎಂದು ಯಾರು ಭಾವನೆ ಮಾಡಿಕೊಳ್ಳಬಾರದು. ಏಕಪಕ್ಷವಾಗಿ ಸಲಹಾಸಮಿತಿಗಳನ್ನು ಮಾಡಿದ್ದರಿಂದ ನಿಲುವಳಿ ಸೂಚನೆಯಲ್ಲಿ ತಂದಿಲ್ಲ. ಈ ನಿಲುವಳಿ ಸೂಚನೆಯನ್ನು ತಂದ ಉದ್ದೇಶವನ್ನು ನಾನು ಹೇಳುತ್ತೇನೆ. ಆದ್ದರಿಂದ ಇದನ್ನು ಸ್ವೀಕಾರ ತಾವು ಮಾಡಬೇಕಾಗುತ್ತದೆ. ಪ್ರಜಾಪ್ರಭುತ್ವದಲ್ಲಿ ವಿಶ್ವಾಸ ನಂಬಿಕೆಯನ್ನು ಇಟ್ಟುಕೊಂಡು ಇವತ್ತು ಪುನಃ ಸ್ಥಾಪನೆ ಮಾಡಬೇಕಾಗುತ್ತದೆ. ಇದು ಬಹಳ ಅತ್ಯಂತ ಪ್ರಾಮುಖ್ಯವಾದಂಥ ವಿಚಾರ. ಗಂಭೀರವಾದ ವಿಚಾರ ಮತ್ತು ಎಲ್ಲ ಸದಸ್ಯರ ಕಾರ್ಯಕಲಾಪಗಳನ್ನು ಬದಿಗೊತ್ತಿ, ಇವತ್ತು ಆದ್ಯತೆಯ ಮೇಲೆ ತೆಗೆದುಕೊಳ್ಳಬೇಕಾದ ವಿಚಾರ. ಏಕೆಂದರೆ ಇದರಲ್ಲಿ ಎರಡು ಭಾಗವಿದೆ. ಈಗ ಜಿಲ್ಲಾ ಪರಿಷತ್ತು ಮಸೂದೆಗೆ ರಾಷ್ಟ್ರಪತಿಗಳ ಅಂಕಿತ ದೊರಕಿದ ಮೇಲೆ ಇದರ ಸಲಹಾ ಸಮಿತಿಗಳ ಅವಶ್ಯಕತೆ ಇದೆಯೇ ? ಇದು ಒಂದು ಪ್ರಶ್ನೆ. ಏಕೆಂದರೆ ಜಿಲ್ಲಾ ಪರಿಷತ್ತಿನಲ್ಲಿ ಇವತ್ತು ಚುನಾವಣೆ ಸಿದ್ಧತೆ ನಡೆಯುತ್ತಿದೆ, ಎಲ್ಲಾ ಮಿಷನರಿಗಳು ಅದರ ತಾಲ್ಲೂಕು ಬೋರ್ಡ್‌ಗಳಲ್ಲಿ, ಜಿಲ್ಲಾ ಮಟ್ಟದಲ್ಲಿ ಆಗಲೀ ಅಥವಾ ರಾಜ್ಯ ಮಟ್ಟದಲ್ಲಿ ಆಗಲೀ ಮಿಷನರಿಗಳನ್ನು ಇದರಲ್ಲಿ ತೊಡಗಿಸಿದ್ದಾರೆ. entiremachinery will have to be monitored for the purpose of election. ಏಕೆಂದರೆ ಈಗ ಸಲಹಾ ಸಮಿತಿ ಮಾಡಲು ಹೊರಟರೆ ತಾಲ್ಲೂಕು ಮಟ್ಟದಲ್ಲಿ ಮತ್ತು ಜಿಲ್ಲಾ ಮಟ್ಟದಲ್ಲಿ ಏನು ಮೆಷಿನರಿಗಳಿವೆ ಅವುಗಳು ಎಲೆಕ್ಷನ್‌ಗೆ ಸಿದ್ಧತೆ ಮಾಡಿಕೊಳ್ಳಲು ಸಾಧ್ಯವಾಗದೇ ಅವರು ದಾರಿ ತಪ್ಪುವಂತಾಗುತ್ತದೆ. ಚುನಾವಣೆ ಮಾಡತಕ್ಕಂಥ ನಿರ್ಧಾರವನ್ನು ಕೈಗೊಂಡಿದ್ದೀರಿ. ಈ ವಿಷಯವನ್ನು ನೇರವಾಗಿ ತೆಗೆದುಕೊಳ್ಳತಕ್ಕಂಥದ್ದನ್ನು ನಾನು ವೇಚ್ಚುತ್ತೇನೆ. ಈ ಕ್ಷಣದಲ್ಲಿ ಚುನಾವಣೆಯನ್ನು ಮಾಡಿ. ಆಕ್ಟೋಬರ್ ಒಳಗೆ ಮಾಡುತ್ತೇವೆ, ಜನವರಿಯಲ್ಲಿ ಮಾಡುತ್ತೇವೆಂದು ಹೇಳಿದ್ದರು. ತಮ್ಮಗಳ ಗಮನ ಕೂಡ ಆಗಲೇ ತಪ್ಪುತ್ತಿದೆ. ಏಕೆಂದರೆ ಇನ್ನು ಮುಂದೆ ಜನವರಿಯಲ್ಲಿ ಆಗುವುದಿಲ್ಲ, ಡಿಸೆಂಬರ್ ಅಲ್ಲಿ ಮಾಡುತ್ತೇವೆ ಎಂದು ಹೇಳಿದರೂ ಹೇಳಬಹುದು. ಅದಕ್ಕೆ ಪ್ರಚೋದನೆ ಸಿಗುತ್ತದೆ. ಪ್ರಜಾಪ್ರಭುತ್ವ ರೀತಿಯಲ್ಲಿ ಇವುಗಳನ್ನು ಮಾಡಬೇಕಾಗುತ್ತದೆ. ಏಕಪಕ್ಷವಾಗಿ ಸಲಹಾ ಸಮಿತಿಗಳನ್ನು ಮಾಡಿದರೆ ಮುಂದೆ ಪ್ರಜಾಪ್ರಭುತ್ವ ರೀತಿಯಲ್ಲಿ ಒಂದು ವ್ಯವಹಾರವನ್ನು ಚೆನ್ನಾಗಿ ಮಾಡುವುದಕ್ಕೆ ಧಕ್ಕೆಯಾಗುತ್ತದೆ. ಈಗ ಸಲಹಾ ಸಮಿತಿಗಳನ್ನು ಮಾಡಬೇಕಾಗಿಲ್ಲ. ಈ ಸಲಹಾ ಸಮಿತಿಯನ್ನು ರಾಜಕೀಯವಾಗಿ ಉಪಯೋಗ ಮಾಡಿಕೊಂಡು ಮುಂದೆ ಬರತಕ್ಕಂಥ ಚುನಾವಣೆಯಲ್ಲಿ ಆಡಳಿತ ಯಂತ್ರದ ದುರುಪಯೋಗ

ಮಾಡಿಕೊಳ್ಳುವ ಉದ್ದೇಶದಿಂದ ಏಕಪಕ್ಷೀಯವಾಗಿ ಈ ಸಲಹಾ ಸಮಿತಿಯನ್ನು ವಾಪಾಡುವುದಕ್ಕೆ ನಮ್ಮಗಳ ಆಕ್ಷೇಪಣೆ ಇದೆ. ಈ ಪಕ್ಷದ ಪರವಾಗಿ ಮಾತ್ರವಲ್ಲ, ಇಡೀ ಒಂದು ವ್ಯವಸ್ಥೆಗೆ ವಿರೋಧವಾಗಿರತಕ್ಕಂಥ ಒಂದು ಆಡಳಿತವನ್ನು ಒಂದು ಪ್ರಜಾಪ್ರಭುತ್ವದ ರೀತಿಯಲ್ಲಿ ಕೊಂಡೊಯ್ಯುವ ದಾರಿಯಲ್ಲಿ ಒಂದು ಬಂಡೆಗಲ್ಲನ್ನು ಎತ್ತಿಹಾಕುವ ಪ್ರಯತ್ನ ನಡೆದಿದೆ ಎಂದು ನಾನು ಈ ವಿಷಯವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಜಿಲ್ಲಾ ಪರಿಷತ್ತಿನ ಕಾನೂನಿನಲ್ಲಿ ತಾಲ್ಲೂಕು ಅಡ್ವೈಸರಿ ಬೋರ್ಡ್ ಮಾಡುವುದಕ್ಕೆ ಅವಕಾಶವಿಲ್ಲ. ನಿಜವಾಗಿ ಒಂದು ನಾನ್ ಅಫಿಷಿಯಲ್ ಸ್ವರೂಪ ಕೊಡಬೇಕೆಂದರೆ ೨೦ ಅಂಶದ ಕಾರ್ಯಕ್ರಮದ ಒಂದು ಸಮಿತಿ ಇದೆ. ಇದಕ್ಕೆ ಸ್ಥಳೀಯ ಶಾಸಕರು ಅಧ್ಯಕ್ಷರಾಗಿರುತ್ತಾರೆ. ಇದನ್ನು ಕರ್ನಾಟಕ ಡೆವಲಪ್‌ಮೆಂಟ್ ಕಮಿಟಿ ಎಂದು ಕರೆದಿದ್ದಾರೆ.

ಶ್ರೀ ಸಿ. ಎಂ. ರೇವಣಸಿದ್ದಯ್ಯ (ಸಿರಗುಪ್ಪ).—ವಿಷಯದ ಮೇಲೆ ಚರ್ಚೆ ನಡೆಯುತ್ತಿದೆಯೋ ಅಥವಾ ಸೂಚನೆಯ ಮೇಲೆ ಚರ್ಚೆ ನಡೆಯುತ್ತಿದೆಯೋ ಅದರ ಬಗ್ಗೆ ವಿವರಣೆ ಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ.—ಕರ್ನಾಟಕ ಡೆವಲಪ್‌ಮೆಂಟ್ ಕಮಿಟಿಯಲ್ಲಿ ಶಾಸಕರುಗಳು ಅಧ್ಯಕ್ಷರಾಗಿದ್ದಾರೆ. ೨೦ ಅಂಶದ ಕಾರ್ಯಕ್ರಮದ ಒಂದು ಸಮಿತಿಯನ್ನು ನಾವು ಕೆ.ಡಿ.ಸಿ. ಎಂದು ಕರೆಯುತ್ತೇವೆ. ಸಲಹಾ ಸಮಿತಿಯವರು ಇದರ ಬಗ್ಗೆ ರೆವ್ಯೂ ಮಾಡಬೇಕಾಗಿತ್ತು. ಅಡ್ವೈಸ್ ಕೊಡಬಹುದಾಗಿತ್ತು. ಎನ್.ಆರ್.ಇ.ಪಿ.ನಲ್ಲೇ ಆಗಲೀ, ಆರ್.ಎಲ್ ಜಿ.ಪಿ.ನಲ್ಲೇ ಆಗಲೀ, ಐ ಆರ್.ಡಿ.ಪಿ.ನಲ್ಲೇ ಆಗಲೀ ಮತ್ತು ಯಾವುದೇ ಈ ಕಾರ್ಯಕ್ರಮಗಳು ಈ ಸಮಿತಿಯಲ್ಲಿ ಬರುತ್ತದೆ. ಆ ಸಮಿತಿ ಈ ಕೆಲಸಗಳನ್ನು ಮಾಡುತ್ತಿರುವಾಗ ಇನ್ನೊಂದು ಸಮಿತಿಯನ್ನು ಸ್ಥಾಪನೆ ಮಾಡತಕ್ಕಂಥದು ಸರಿಯೇ ಎಂಬುದು ಒಂದು ಪ್ರಶ್ನೆ ತಾವುಗಳು ಯಾವಾಗಲೂ ಆರ್ಥಿಕ ಸಂಕಷ್ಟದಲ್ಲೇ ಇದ್ದೇವೆ ಎಂದು ಹೇಳುತ್ತಲೇ ಇದ್ದೀರಿ. ಆರ್ಥಿಕ ಸಂಕಷ್ಟದಲ್ಲಿ ಇರುವಾಗ ಇನ್ನೊಂದು ಸಮಿತಿಯನ್ನು ಏತಕ್ಕೆ ಮಾಡಬೇಕು ? ನಾನ್ ಪ್ಲಾನ್ ಎಕ್ಸ್‌ಪೆಂಡಿಚರ್ ಇದರಿಂದ ಜಾಸ್ತಿಯಾಗುತ್ತದೆ. ಕೆಲಸ ಮಾಡತಕ್ಕಂಥ ಅಧಿಕಾರಿಗಳಿಗೂ ಕೂಡ ಸಾಕಷ್ಟು ತೊಂದರೆಯಾಗುತ್ತದೆ. ಮಾಸ್ ಕಾಂಟ್ಯಾಕ್ಟ್ ವಿಸಿಟಿಂಗ್‌ಗಳನ್ನು ಜಾಸ್ತಿ ಮಾಡಬೇಕು. ಇಪ್ಪತ್ತು ಅಂಶಗಳ ಕಾರ್ಯಕ್ರಮಗಳ ಸಭೆ ಪ್ರತಿ ತಿಂಗಳೆ ಮೂರನೇ ತಾರೀಖು ನಡೆಯುತ್ತಿದೆ. ಹೀಗೆ ಇರತಕ್ಕಂಥ ಸಂದರ್ಭದಲ್ಲಿ ಒಂದು ಹೊಸದಾದ ವ್ಯವಸ್ಥೆಯನ್ನು ಆಡಳಿತ ಮಟ್ಟದಲ್ಲಿ ತರುವುದಕ್ಕೆ ಹೊರಟಿದ್ದೀರಿ, ಸದುದ್ದೇಶ ಇಲ್ಲದೇ ಇರತಕ್ಕಂಥ ಒಂದು ವ್ಯವಸ್ಥೆಯನ್ನು ನಾವುಗಳು ಇವತ್ತು ವಿರೋಧಪಕ್ಷದವರಾಗಿ ಕುಳಿತುಕೊಂಡು ಸಹಿಸಿಕೊಳ್ಳುವುದಕ್ಕೆ ಆಗುವುದಿಲ್ಲ. ಇದು ಒಂದು ಭಾಗ, ಇನ್ನು ಜಿಲ್ಲಾ ಪರಿಷತ್ತಿನ ಮಸೂದೆಗೆ ರಾಷ್ಟ್ರಪತಿಯವರ ಅಂಕಿತ ದೊರೆತ ಮೇಲೆ ಇದರ ಬಗ್ಗೆ ಚಿಂತನೆಯನ್ನು ಮಾಡದೆ ಚುನಾವಣೆ ನಡೆಸತಕ್ಕಂಥ ಏಕ ಉದ್ದೇಶವನ್ನು ಇಟ್ಟುಕೊಂಡು ವ್ಯಾಪಕವಾದ ಚರ್ಚೆಯನ್ನು ಈ ಸದನದಲ್ಲೇ ಆಗಬೇಕಾಗಿತ್ತು. ಇದು ಎರಡನೇ ಭಾಗ. ತಾವು ಏಕಪಕ್ಷವಾಗಿ ಮುಂದುವರಿಯುತ್ತಿದ್ದೀರಿ. ಮಂತ್ರಿಗಳು ಎಲ್ಲರಿಗೂ ಪತ್ರ ಬರೆದು ತಾವುಗಳು ೧೫ ಹೆಸರುಗಳನ್ನು ಕೊಡಿ ಎಂದು ಕೇಳಿದ್ದೀರಿ. ಕೆಲವರು ಕೊಟ್ಟಿದ್ದಾರೆ, ಕೆಲವರು ಕೊಟ್ಟಿಲ್ಲ. ೧೫ ಹೆಸರುಗಳನ್ನು ಕೇಳಿದ ಮೇಲೆ ಸರ್ಕಾರಕ್ಕೆ ಸೌಜನ್ಯ ಇರಬೇಕು. You cannot insult the Members. ೧೫ ಹೆಸರುಗಳನ್ನು ತೆಗೆದು ೫ ಹೆಸರುಗಳನ್ನು ಸೇರಿಸುವುದು, ಒಂದು ಹೆಸರನ್ನೂ ಸೇರಿಸದೆ ಇರತಕ್ಕಂಥಾದ್ದು ಸೌಜನ್ಯತೆಯೇ ? This is not only an insult to the Members but also to the entire House, ಇನ್ನು ಮೇಲೆ ನಾವುಗಳು ಹೆಸರುಗಳನ್ನು ಯಾರು ಕೇಳಿದರೂ ಕೊಡುವುದಿಲ್ಲ. You cannot treat the MLAs like this. It is abhoring. ಈ ರೀತಿಯಲ್ಲಿ ತಾವು ಒಂದು ಆಸೌಜನ್ಯತೆಯನ್ನು ಅಧಿಕಾರದಲ್ಲಿದ್ದೇವೆ ಎನ್ನುವ ಮದದಿಂದ ತೋರಿಸುವುದು ಇದ್ದರೆ ನಾವು ಸಹಕಾರವನ್ನು ಕೊಡಲಿಕ್ಕೆ ಆಗುವುದಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ವಿತಕ್ಕೆ ಕೂಗುತ್ತೀರಿ ?

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೇ, ನನ್ನದೊಂದು ಕ್ರಿಯೊಲೋಪವಿದೆ ಈಗ ನಾವು ಅಡ್ಜಸ್ಟಿಬಿಲಿಟಿ ಬಗ್ಗೆ ಮಾತನಾಡುತ್ತಿದ್ದೇವೆ. ಕ್ರಮ ಲೋಪ ಎತ್ತಿದ್ದೇನೆ. ಇದು ವಿಷಯ ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಕಾರಣಗಳು ಇವೆ. ಕಾನೂನಿನ ಚೌಕಟ್ಟಿನಲ್ಲಿ ಇರತಕ್ಕಂಥ ಒಂದು ಪೂರ್ವಭಾವಿ

ವಿವರಣೆಯನ್ನು ಪಂತರ್ತು ತತ್ಸಂಬಂಧವಾಗಿ ತಮ್ಮ ಮನಸ್ಸನ್ನು ಒಲಿಸಿಕೊಳ್ಳುವ ಪ್ರಯತ್ನ ಮಾಡಬೇಕಿ ಇದನ್ನು ಪೂರ್ವಬಾವಿಯಾಗಿ ಹೇಳತಕ್ಕಂತ ವಿಚಾರ. ಇದನ್ನು ಇಷ್ಟಕ್ಕೆ ಮಾತ್ರ ಸೀಮಿತ ಮಾಡಿ ಕೊಂಡರೆ ತಮ್ಮ ಪೂರ್ವಬಾವಿಯಾಗಿ ವಿವರಣೆಯನ್ನು ಕೊಡುವುದಕ್ಕೆ ಅವಕಾಶ ಇದೆ. ಆದರೆ ಸನ್ಮಾನ್ಯ ವೀರಪ್ಪಮೊಯಿಲಿಯವರು ಈಪಿಚಾರದಲ್ಲಿ ಒಂದು ದೊಡ್ಡ ವಾದವನ್ನು ಶುರುಮಾಡಿ ಇದಕ್ಕೆ ಸಂಬಂಧ ಪಟ್ಟವೆಲ್ಲ ವಿವರಗಳನ್ನು ಈಗಾಗಲೇ ಹೇಳಿಬಿಟ್ಟಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ತಾವು ಅನುಮತಿ ಕೊಟ್ಟಮೇಲೆ ಮಾತನಾಡುತ್ತಿದ್ದಾಗ ಇದರಲ್ಲಿ ಪಾಯಿಂಟ್ ಆಫ್ ಆರ್ಡರ್ ಏನು ಬಂತು ?

ಶ್ರೀ ಲಕ್ಷ್ಮೀಸಾಗರ್.—ಕ್ರಮಲೋಪ ಎತ್ತಿದ್ದೇನೆ. ಕ್ರಮ ಲೋಪವೆಂದು ನಾನು ಹೇಳಿದ್ದೇನೆ

೧೨–೩೦ ಪಿ. ಎಂ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರು ಹೇಳಿದ್ದನ್ನೇ ಹೇಳುವುದು.

ಅಧ್ಯಕ್ಷರು.—ಅವರ ಹೇಳಿಕೆ ಮುಂಗಿಸಲಿ.

(ಗೊಂದಲ)

ಶ್ರೀ ಪಿ. ರತ್ನಾಕರ್.—ಸುಮ್ಮನೆ ಅವರು ಪಾಯಿಂಟ್ ಆಫ್ ಆರ್ಡರ್ ಎತ್ತುತ್ತಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ನನ್ನ ಕ್ರಮ ಲೋಪ ಇಷ್ಟೇ. ನಿಲುವಳಿ ಸೂಚನೆ ತರಲಿಕ್ಕೆ ಪೂರ್ವ ಭಾವಿಯಾಗಿ ವಾದ ಮಂಡನೆಗೆ ಅವಕಾಶ ಇದೆ. ತಾವು ಅದಕ್ಕೆ ಅಪ್ಪಣೆ ಕೊಟ್ಟಿದ್ದೀರಿ. ವಾದ ಮಂಡನೆ ಸೀಮಿತವಾಗಿರಬೇಕು. ಇದು ೫೯ನೇ ಅಧಿನಿಯಮಕ್ಕೆ ಸೀಮಿತವಾಗಿರತಕ್ಕ ವಿಷಯ ಆದ್ದರಿಂದ ಇದನ್ನು ಚರ್ಚೆಗೆ ತೆಗೆದುಕೊಳ್ಳಿ ಎಂದು, ಇಷ್ಟು ಮಾತ್ರ ಹೇಳಲಿಕ್ಕೆ ಸಾಧ್ಯವಿದೆ. ಸನ್ಮಾನ್ಯ ವೀರಪ್ಪಮೊಯ್ಲಿ ಯವರು ಪೂರ್ತಿ ವಿವರಣೆಗಳನ್ನೇ ನಿಲುವಳಿ ಸೂಚನೆಗೆ ತಾವು ಅನುಮತಿ ಕೊಡುವುದಕ್ಕೆ ಮೊದಲೇ ಹೇಳುತ್ತಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಲಕ್ಷ್ಮೀಸಾಗರ್‌ರವರಿಗೆ ಅವರ ಕ್ರಿಯೆಯಲ್ಲಿ ಲೋಪವಾಗಿಬಿಟ್ಟಿದೆ.

ಅಧ್ಯಕ್ಷರು.—ಮಾನ್ಯ ಮೊಯ್ಲಿಯವರೇ, ಬೇಗ ಮುಂಗಿಸಿ.

ಶ್ರೀ ಎಂ. ವೀರಪ್ಪಮೊಯ್ಲಿ.—ಅಧ್ಯಕ್ಷರೇ. ಈಗ ಈ ಸಮಿತಿಗಳನ್ನು ಪುನರ್‌ರಚಿಸುವುದು ಯೋಗ್ಯ ವಲ್ಲ ಹಾಗೂ ಇದರ ಅಗತ್ಯತೆ ಇಲ್ಲ. ಇದು ಒಂದು ರೀತಿಯಲ್ಲಿ ತಾಲ್ಲೂಕಿಂ ಆಡಳಿತದಲ್ಲಿ ರಾಜಕಾರಣ ವನ್ನು ಹೇರಿದಂತಾಗುತ್ತದೆ.

ಶ್ರೀ ವೇದಾಂತ ಹೆಮ್ಮಿಗೆ.—ಅಧ್ಯಕ್ಷರೇ, ಈ ವಿಷಯದ ಬಗ್ಗೆ ಮಾನ್ಯ ಸಚಿವರು ಕ್ರಿಯಾಲೋಪ ವನ್ನು ಎತ್ತಿದ್ದಾರೆ.

ಅಧ್ಯಕ್ಷರು.—ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಕೆ. ಎಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ, ಪದೇ ಪದೇ ಮಾನ್ಯ ಲಕ್ಷ್ಮೀಸಾಗರ್ ರವರು ಇದನ್ನೇ ಹಿಡಿದುಕೊಂಡು ಮಾತನಾಡುತ್ತಿದ್ದಾರೆ. ಯಾವುದೇ ನಿಲುವಳಿ ಸೂಚನೆಯನ್ನು ತರುವಾಗ ಅದರ ಬಗ್ಗೆ ತಮಗೆ ಮನವರಿಕೆ ಮಾಡಿಕೊಡುವುದು ಸಹಜ. ನಿಲುವಳಿ ಸೂಚನೆಗೆ ಅನುಮತಿ ಕೊಟ್ಟರೆ ವಿಷಯವನ್ನು ಪ್ರಸ್ತಾಪ ಮಾಡಬಹುದು. ನಿಲುವಳಿ ಸೂಚನೆ ತರುವ ವಿಷಯದ ಮೇಲೆ ಕೆಲವು ಅಂತಗಳನ್ನು ಪೂರ್ವಭಾವಿ ವಾದದಲ್ಲಿ ಹೇಳಿದರೆ ಏನೂ ತಪ್ಪಾಗುವುದಿಲ್ಲ. ಹಿಂದೆ ಲಕ್ಷ್ಮೀಸಾಗರ್ ರವರು ಈ ಕಡೆ ಇದ್ದಾಗಲೂ ಅವರು ಮಾಡುತ್ತಿದ್ದ ಕೆಲಸವೇ ಇದು. ಈಗ ದೊಡ್ಡ ವೇದಾಂತ ಹೇಳಿದರೆ ಹೇಗೆ ? ಇದರಲ್ಲಿ ಪಾಯಿಂಟ್ ಆಫ್ ಆರ್ಡರ್ ಪ್ರಶ್ನೆ ಬರುವುದಿಲ್ಲ. ಈ ವಿಷಯದ ಬಗ್ಗೆ ಚರ್ಚೆ ಮಾಡಲು ನಿಲುವಳಿ ಸೂಚನೆಗೆ ಅವಕಾಶಕೊಡಬೇಕು. ಏಕ ಕೊಡಬಾರದೆಂದು ನಾವು ಕೇಳುತ್ತಿದ್ದೇವೆ.

ಅಧ್ಯಕ್ಷರು.—ವಿರೋಧ ಪಕ್ಷದ ನಾಯಕರಾದ ಮಾನ್ಯ ಬಂಗಾರಪ್ಪನವರು ಈಗಾಗಲೇ ಸಾಕಷ್ಟು ಹೇಳಿದ್ದಾರೆ. ತಾವು ಕುಳಿತುಕೊಳ್ಳಿ.

ಶ್ರೀ ಎಂ. ವೀರಪ್ಪಮೊಯ್ಲಿ.—ಅಧ್ಯಕ್ಷರೇ, ತಾವು ಈ ನಿಲುವಳಿ ಸೂಚನೆಗೆ ಅನುಮತಿ ಕೊಟ್ಟರೆ ವಿನಃ ಅಭ್ಯಂತರವಿರುವುದಿಲ್ಲ. ನೀವು ನಿಲುವಳಿ ಸೂಚನೆಗೆ ಒಪ್ಪಿಕೊಂಡರೆ ನಾವು ಸಂಮ್ಮನೆ ಕುಳಿತು ಕೊಂಡು ಬಿಡುತ್ತೇವೆ.

ಅಧ್ಯಕ್ಷರು.—ಮಾನ್ಯ ವಜೀರ್‌ಸಾಬ್‌ರವರು ಮಾತನಾಡಲಿ.

ಶ್ರೀ ಎಂ. ವೀರಪ್ಪಮೊಯ್ಲಿ.—ನಿಲುವಳಿ ಸೂಚನೆಗೆ ನಿಮ್ಮ ಮನ ಒಲಿಸತಕ್ಕಂತಹ ಪ್ರಯತ್ನ ವನ್ನು ನಾವು ಮಾಡಬೇಕು. ಆ ಪ್ರಯತ್ನಕ್ಕೆ ತಾವು ಅವಕಾಶ ಕೊಡಬೇಕು.

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರು ಬಹಳಷ್ಟು ಮಾತನಾಡಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಇದು ಪ್ರಜಾಪ್ರಭುತ್ವದ ಪ್ರತಿಷ್ಠೇ ವಿಚಾರ. ಇದನ್ನು ಸದನ ಜಲ್ಲಿ ಎತ್ತಲಿಕ್ಕೆ ಅವಕಾಶ ಮಾಡಿಕೊಡಬೇಕು. ತವಂಲ್ಲಿ ದಯಾಳತ್ವ ಇದ್ದುದರಿಂದ ತಮ್ಮನ್ನು ಮನ ಒಲಿಸಿ ಈ ವಿಷಯವನ್ನು ಪ್ರಸ್ತಾಪ ಮಾಡಬೇಕೆಂಬುದೇ ನಮ್ಮ ವಿಚಾರ. ಇದರಲ್ಲಿ ದೊಡ್ಡಸ್ಥಿಕೆ ಏನು ಇಲ್ಲ. ಅವರಲ್ಲಿ ಪ್ರಜಾಪ್ರಭುತ್ವದ ಸಧ್ಭಾವನೆ ಇಲ್ಲ ಒಂದು ದೊಡ್ಡ ಆನೆ ಸುಮ್ಮನೆ ಬಿದ್ದಿದೆ ಎಂದರೆ, ಅದನ್ನು ಹಾಗೆಯೇ ಬಿಟ್ಟರೆ ಏನು ಪ್ರಯೋಜನವಾಗುವುದಿಲ್ಲ. ಅದಕ್ಕೆ ಅಂಕುಶದಿಂದ ತಿವಿದೂ ಎಚ್ಚರಗೊಳಿಸಬೇಕು. ಆದುದರಿಂದ ಈ ನಿಲುವಳಿ ಸೂಚನೆಯನ್ನು ತರಲಿಕ್ಕೆ ತಾವು ಒಪ್ಪಬೇಕು. ತಾವೆ ಒಪ್ಪಿ ಈ ವಿಷಯವನ್ನು ಸದನದಲ್ಲಿ ಪ್ರಸ್ತಾಪ ಮಾಡತಕ್ಕಂತಹ ಅವಕಾಶವನ್ನು ಕೊಡ ಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇದಕ್ಕಂತ ದೊಡ್ಡ ವಿಚಾರ ಇಲ್ಲವೇ ಇಲ್ಲ. ಆದ್ದರಿಂದ ಈ ನಿಲುವಳಿ ಸೂಚನೆಗೆ ತಾವು ಒಪ್ಪಿಗೆಯನ್ನು ಕೊಡಬೇಕೆಂದು ತವ್ಮಲ್ಲಿ ಆಗ್ರಹಪೂರ್ವಕವಾಗಿ ವಿನಂತಿ ಮಾಡಿಕೊಳ್ಳುತ್ತೇನೆ.

(ಗೊಂದಲ)

ಅಧ್ಯಕ್ಷರು.—ಇದರ ಬಗ್ಗೆ ಮಾನ್ಯ ಬಂಗಾರಪ್ಪನವರು ಚೆನ್ನಾಗಿ ಹೇಳಿದ್ದಾರೆ ಹಾಗೂ ಮಾನ್ಯ ಮೊಯ್ಲಿಯವರು ಚೆನ್ನಾಗಿ ಹೇಳಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ನಾವು ಆದರ ಬಗ್ಗೆ ಹೇಳಿದ್ದೇವೆಂದ ಮೇಲೆ ವಿಷಯವನ್ನು ಚರ್ಚೆಗೆ ಆಡ್‌ಮಿಟ್ ಮಾಡಿಬಿಡಿ.

ಅಧ್ಯಕ್ಷರು.—ಇದು ಪ್ರೈಮಾಫೇಸಿ ಕೇಸ್ ಆಗುತ್ತದೋ ಇಲ್ಲವೋ ಎಂಬುದನ್ನು ನೋಡುತ್ತಿದ್ದೇನೆ

ಶ್ರೀ ಕೆ. ಹೆಚ್. ಪಾಟೀಲ್.—ನಮ್ಮ ಪಾರ್ಲಿಮೆಂಟರಿ ವ್ಯವಹಾರಗಳ ಸಚಿವರು ಇದರ ಬಗ್ಗೆ ಕ್ರಿಯಾಲೋಪದ ಮಾತಾಡಿದ್ದಾರೆ.

ಅಧ್ಯಕ್ಷರು.—ಕನ್‌ಸರ್ನ್ಡ್ ಮಿನಿಸ್ಟರ್ ಮಾತನಾಡಲಿ ಇರಿ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಅಧ್ಯಕ್ಷರೇ, ನೀವು ಸ್ವಲ್ಪ ಅವಕಾಶ ಕೊಟ್ಟರೆ ನಾನೂ ಒಂದೆರಡೂ ಮಾತುಗಳನ್ನು ಹೇಳುತ್ತೇನೆ. ಪ್ರಜಾಪ್ರಭುತ್ವದಲ್ಲಿ ಸಾವಂನಿರ್ದೇಶನ ಮೂಲಕವಾಗಿ ಸಮಿತಿಗಳನ್ನು ರಚಿಸಿ ಮಾಡತಕ್ಕಂತಾದ್ದನ್ನು ಇಲ್ಲಿ ಎತ್ತಿದ್ದಾರೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಹೆಚ್ಚಿಗೆ ಚುನಾವಣೆ ಗಳಲ್ಲಿ ಆಸಕ್ತಿ ಇದೆ. ಇದೇ ತತ್ವವನ್ನು ಪ್ರಜಾಪ್ರಭುತ್ವದಲ್ಲಿ ಬಳಸಲಾಗುತ್ತದೆ. ಈ ಪ್ರಶ್ನೆ ಏನೆಂದರೆ, ಮುಂದೆ ಬರುವ ಚುನಾವಣೆಗಳಿಗೆ ಈಗಾಗಲೇ ಭೂಮಿಕೆ ಸಿದ್ಧವಾಗಿದೆ. ಈ ಚುನಾವಣೆಗಳು ಆದ ಮೇಲೆ ಬರತಕ್ಕಂತಹ ಸಾಂಸ್ಥಿಕ ಘಟಕಗಳು ಹಾಗೂ ಅವುಗಳ ಸ್ವರೂಪವನ್ನು ಕೂಡ ಈಗಲೇ ಮಾಡುತ್ತಿದ್ದಾರೆ. ಈ ಚುನಾವಣಾ ಮಂಡಲಿ ಬಂದ ಮೇಲೆ ತಾಲ್ಲೂಕು ಬೋರ್ಡ್ ಮಂಡಲಿಗಳು ಇರುವುದಿಲ್ಲ. ಈಗಾಗಲೇ ತಾಲ್ಲೂಕು ಮಂಡಳಿಗಳು ಕೆಲಸ ಮಾಡುತ್ತಿವೆ. ತಾಲ್ಲೂಕು ಬೋರ್ಡ್‌ಗಳು ಇರುವಾಗಲೇ ಈ ಸಲಹಾ ಮಂಡಳಿಗಳನ್ನು ರಚಿಸಿ ಮಾಡಿರುವುದು ನಿರರ್ಥಕವಾಗಿದೆ. ಇದರಲ್ಲಿ ಯಾವ ಪುರುಷಾರ್ಥ ಅಡಗಿದೆಯೋ ಗೊತ್ತಿಲ್ಲ, ಈ ರೀತಿ ಮಾಡಿರುವ ಸಲಹಾ ಸಮಿತಿಗಳಲ್ಲಿ ನಿಮ್ಮ ಜನಗಳೇ ಜಾಸ್ತಿ ಹಾಕಿಕೊಂಡು ಬಿಟ್ಟರೆ ರಾಜಕಾರಣದಲ್ಲಿ ಬಹಳ ಪ್ರಯೋಜನವಾಗುತ್ತದೆಂದೂ ತಮ್ಮ ಅಭಿಪ್ರಾಯ ವಾಗಿದೆ. ಇದರಿಂದ ದೊಡ್ಡ ರಾಜಕಾರಣವಾಗುವುದು.

ಶ್ರೀ ವೇದಾಂತ ಹೆಬ್ಬಿಗೆ.—ಮಾನ್ಯ ಅಧ್ಯಕ್ಷರೇ, ಒಂದು ನಿಮಿಷ. ತಮ್ಮ ಮೂಲಕ ಅವರಿಗೆ ಒಂದೂ ಕೇಳುತ್ತೇನೆ.

ಅಧ್ಯಕ್ಷರು.—ನಿಮಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡುವುದಿಲ್ಲ.

ಶ್ರೀ ಕೆ. ಎಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ, ಈ ನಾನು ನಿರ್ದೇಶನ ಮಾಡುವುದು ಕೂಡ ಬಹಳ ತೊಡಕಾದಂತಹ ಕೆಲಸ. ಇವತ್ತು ನಮ್ಮವರು ಯಾವ ತತ್ವದ ಮೇಲೆ ಈ ರೀತಿ ನಾವು ನಿರ್ದೇಶನ ಮಾಡುವುದಕ್ಕೆ ಹೊರಟಿದ್ದಾರೆ ? ನಿಮ್ಮ ಮನಸ್ಸಿನಲ್ಲೇ ಇದನ್ನು ಸ್ಪಷ್ಟವಾಗಿ ಯೋಚನೆ ಮಾಡಿ ನೋಡಿ. ತೆಲುಗಿನಲ್ಲಿ ಒಂದು ಗಾದೆ ಇದೆ ಅದೇನೆಂದರೆ. ನಾದುಂ ನಾದೇ, ನೀದು ನಾದೇ, ಅಂದರೆ ನನ್ನದು ನನ್ನದೇ, ನಿನ್ನದೂ ನನ್ನದೇ ಎಂದು. ನೀವು ಗೆದ್ದಿರುವ ಕ್ಷೇತ್ರಗಳಲ್ಲಿ ಸಲಹಾ ಸಮಿತಿಗೆ ನಿಮ್ಮವರೇ ಆದ ೧೫ ಜನರನ್ನು ನೇಮಕ ಮಾಡಿರುತ್ತೀರಿ. ಅದೇ ನಾವು ಗೆದ್ದ ಕ್ಷೇತ್ರದಲ್ಲಿ ನಿಮ್ಮವರು ೧೦ ಜನ ನಮ್ಮವರು ೫ ಜನ ಮಾತ್ರ. ಇದು ಯಾವ ತತ್ವ ?

ತಿವಮೊಗ್ಗದ ಭೂ ನ್ಯಾಯ ಮಂಡಳಿಯಲ್ಲಿ ೪ ಜನ ಹಾಕಿದ್ದರು ಆದರೆ ನನ್ನ ಹೆಸರನ್ನು ಹಾಕಿಲ್ಲ. ಸಹಕಾರ ಸಂಘದಲ್ಲಿದ್ದು ವ್ಯವಹಾರ ಮಾಡಿ ತಿಪ್ಪಿನ ಕ್ರಮಕ್ಕೆ ಗುರಿಯಾಗಿ ರಾಜೀನಾಮೆ ಕೊಟ್ಟಿರುವ ವ್ಯಕ್ತಿಯ ದಾಖಲೆಗಳನ್ನು ತಮ್ಮ ಸದನದ ಮುಂದೆ ಇಟ್ಟಿದ್ದೇನೆ. ಅಂತಹ ವ್ಯಕ್ತಿಯನ್ನು ಹಾಕಿದ್ದಾರೆ. ರವಿನ್ಯೂ ಮಂತ್ರಿಗಳನ್ನು ಕೇಳಿದರೆ ಅದು ನನಗೆ ಗೊತ್ತಿಲ್ಲವೆಂದು ಹೇಳಿದ್ದಾರೆ. ಇದರಿಂದ ಅಪಾಯ ಏನು ಇದೆಯೆಂದು ಪರಿಶೀಲನೆ ಮಾಡದೆ ಪಕ್ಷದ ಒತ್ತಡದಿಂದ ನೀವು ಕಮಾಡಿದರೆ ನಿಮಗೆ ತಿರುಗಿ ಹೊಡೆಯತಕ್ಕಂತಹ ಪರಿಸ್ಥಿತಿ ಬರುತ್ತದೆ. ಈ ರೀತಿ ಅನಾವಶ್ಯಕ ಸಲಹಾಸಮಿತಿಗಳನ್ನು ಸುಮ್ಮನೆ ಮಾಡಿದರೆ ಚಿಲ್ಲರೆ ರಾಜಕೀಯಕ್ಕೆ ಅವಕಾಶ ಕೊಟ್ಟಹಾಗೆ ಆಗುತ್ತದೆ. ಇದರಲ್ಲಿ ಯಾವ ಪುರುಷಾರ್ಥವೂ ಇಲ್ಲ. ಈ ಸಲಹಾ ಸಮಿತಿಗಳನ್ನು ರದ್ದುಪಡಿಸುತ್ತೇವೆಂದು ಮಾನ್ಯ ಮಂತ್ರಿಗಳು ಒಪ್ಪಿಕೊಂಡರೆ, ಮಾನ್ಯ ಲಕ್ಷ್ಮೀಸಾಗರ್ ತಲೆ ಬಿಸಿ ಮಾಡಿಕೊಳ್ಳುವುದು ತಪ್ಪುತ್ತದೆ. ನಿಲುವಳಿ ಸೂಚನೆ ಮೇಲೆ ಚರ್ಚೆ ಮಾಡುವುದು ತಪ್ಪುತ್ತದೆ. ಆದುದರಿಂದ ರದ್ದುಮಾಡುತ್ತೇವೆ ಎನ್ನುವ ಭರವಸೆ ಅವರ ಕಡೆಯಿಂದ ತಾವು ಕೊಡಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್ —ಅಧ್ಯಕ್ಷರೇ, ನಾನು ಕೂಡ ಈ ವಿಚಾರದಲ್ಲಿ.....

ಸಭಾಪತಿಯವರು.—ಈಗಾಗಲೇ ಮೂರು ಜನ ಸದಸ್ಯರು ಮಾತನಾಡಿದ್ದಾರೆ. ತಾವು ಈ ನೋಟೀಸ್‌ಗೆ ಸಹಿ ಕೂಡ ಹಾಕಿಲ್ಲ.

ಶ್ರೀ ಧರ್ಮಸಿಂಗ್.—ನಾನು ಒಂದೇ ಒಂದು ನಿಮಿಷದಲ್ಲಿ ಮುಗಿಸುತ್ತೇನೆ.

ಶ್ರೀ ಪ್ರತಾಪ್ ಚಂದ್ರಶೆಟ್ಟಿ.—ಹೊಸಬರಿಗೆ ಹಳಬರಿಗೆ ಏನು ವ್ಯತ್ಯಾಸ ಇದೆ ಎನ್ನುವುದನ್ನು ಹೇಳಬೇಕು, ಹೊಸಬರು ಎಂದು ಹೇಳಿ ಬಾಯಿ ಮುಚ್ಚಿಸುವ ಕೆಲಸ ಸರಿಯಲ್ಲ.

ಶ್ರೀ ಧರ್ಮಸಿಂಗ್.—ಅಧ್ಯಕ್ಷರೇ, ಹೋದ ಅಧಿವೇಶನದಲ್ಲಿ ನಿಯಮ ೩೫ರ ಪ್ರಕಾರ ಈ ವಿಷಯ ಪ್ರಸ್ತಾಪ ಮಾಡಿದಾಗ ಒಂದು ಘಂಟೆ ಕಾಲ ಚರ್ಚೆಯಾಯಿತು. ಆಗ ಶ್ರೀ ಬೊಮ್ಮಾಯಿ ಮತ್ತು ಮಾನ್ಯ ದೇವೇಗೌಡರು ಇದ್ದರು. ಸರ್ಕಾರದ ಕಡೆಯಿಂದ ಸಲಹಾ ಸಮಿತಿಗಳನ್ನು ಮಾಡುವ ಬಗ್ಗೆ ಏನಾ ನಡೆದಿದೆಯೆಂದು ಕೇಳಿದ್ದೇವೆ. ಇದರ ಬಗ್ಗೆ ಸರ್ಕಾರದಿಂದ ನಿಖರವಾದ ಉತ್ತರ ಇಲ್ಲ. ಜಿಲ್ಲಾ ಪರಿಷತ್ತು ಚಾರಿಗೆ ಬರುವುದು ಇನ್ನು ನಾಲ್ಕು, ಎಂಟು ತಿಂಗಳು ತಡವಾಗಿ ಆಗಬಹುದು. ಅದಕ್ಕಾಗಿ ಸಲಹಾ ಸಮಿತಿಗಳನ್ನು ನೇಮಕಮಾಡಿಕೊಳ್ಳುತ್ತೇವೆಂದು ಅವತ್ತೆ ಹೇಳುಹುದಾಗಿತ್ತು. ಆದರೆ ಹಾಗೆ ಸರ್ಕಾರದವರು ಹೇಳಲಿಲ್ಲ. ಇವತ್ತು ಪೌಲ್ಯಧಾರದ ಮೇಲೆ ರಾಜಕೀಯದ ಬಗ್ಗೆ ಅವರು ಮಾತನಾಡುತ್ತಿದ್ದಾರೆ. ಮಾನ್ಯ ಬೊಮ್ಮಾಯಿ ಅವರು ವಿರೋಧಪಕ್ಷದ ನಾಯಕರಾಗಿದ್ದಾಗ ಮಾತ್ರ ದೇವರಾಜ್ ಅರಸ್‌ರವರ ಮಂತ್ರಿಮಂಡಲದಲ್ಲಿ ಟ್ರಿಬ್ಯೂನಲ್‌ಗೆ ಶಾಸಕರನ್ನು ಹಾಕಿಲ್ಲ ಎನ್ನುವ ಕಾರಣಕ್ಕಾಗಿ ಧರಣಿ ಕುಳಿತಿದ್ದರು. ಇವತ್ತು ಅಬ್ದುಲ್ ನಜೀರ್ ಸಾಬ್‌ರವರು ಜಿಲ್ಲಾ ಪರಿಷತ್ತಿನ ಚುನಾವಣೆ ಮಾಡುವುದಕ್ಕೆ ಹೊರಟಿದ್ದಾರೆ. ಈ ಸಮಯದಲ್ಲಿ ಹಳ್ಳಿಗಳಿಗೆ ಅನುಕೂಲ ಆಗುವಂತಹ ವಿಚಾರವನ್ನು ಮಾಡುತ್ತಿದ್ದಾರೆ. ಇನ್ನು ಆರು ತಿಂಗಳಲ್ಲಿ ಸಲಹಾ ಸಮಿತಿಗಳನ್ನು ಮಾಡಿ ಜನರ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಾಧ್ಯವಾಗುವುದೇ ? ಇವತ್ತು ನಮ್ಮ ಪಕ್ಷದವರು ೬೬ ಕ್ಷೇತ್ರಗಳಿಂದ ಗೆದ್ದು ಬಂದಿದ್ದಾರೆ. ನಮಗೂ ನಿಮಗೂ ಹೆಚ್ಚಿನ ಪರ್ಸೆಂಟ್ ವ್ಯತ್ಯಾಸ ಇಲ್ಲ. ಇಂದಿರಮ್ಮ ಸರ್ಕಾರ ಬಂದ ಮೇಲೆ ಅಧಿಕಾರಿಗಳ

ಸಹಾಯ ಪಡೆದು ಯಾವ ರೀತಿ ಚುನಾವಣೆ ಮಾಡಿದಿರಿ ಎನ್ನುವುದು ದೇಶದ ಜನತೆಗೆ ಗೊತ್ತಿದೆ. ಜೀವರ್ಗಿ ಮಂತ ಕ್ಷೇತ್ರದಲ್ಲಿ ನಾಲ್ಕು ಜನ ಆರಿಸಿಬಂದಿದ್ದೇವೆ. ಹೆಚ್ಚಿನ ಬಹುಮತವನ್ನು ಜನ ಅಲ್ಲಿ ನಮಗೆ ಕೊಟ್ಟಿದ್ದಾರೆ. ತಾವು ಯಾವ ಆಧಾರದ ಮೇಲೆ ಅಲ್ಲಿಗೆ ನಮ್ಮ ಕಡೆಯವರನ್ನು ಐದು ಜನರನ್ನು ಹಾಕಿದ್ದೀರಿ ತಮ್ಮ ಕಡೆಯವರನ್ನು ೧೦ ಜನರನ್ನು ಹಾಕಿದ್ದೀರಿ ? ತಾವು ಈ ರೀತಿ ದುರುದ್ದೇಶದಿಂದ ಸಲಹಾ ಸಮಿತಿಗಳನ್ನು ಮಾಡುತ್ತಿದ್ದೀರಿ. ಸಲಹಾ ಸಮಿತಿಗಳನ್ನು ನೇಮಕಮಾಡುವುದಕ್ಕೆ ಯಾವ ನಿಯಮಗಳನ್ನು ಹಾಕಿಕೊಂಡಿದ್ದೀರಿ ? ಯಾವ ಆಧಾರದ ಮೇಲೆ ಸಲಹಾ ಸಮಿತಿಗಳನ್ನು ಮಾಡುತ್ತಿದ್ದೀರಿ ಎಂಬುದನ್ನು ಹೇಳಬೇಕು, ತಾವು ಅಧಿಕಾರ ದುರುಪಯೋಗ ಎನ್ನುವ ಶಂಕೆಯ ಮೇಲೆ ವಿರೋಧ ಪಕ್ಷದ ನಿಲುವಳಿ ಸೂಚನೆಯನ್ನು ತಂದಿದ್ದೀರಿ. ನಾಲ್ಕು ತಿಂಗಳು ಕಳೆದಮೇಲೆ ರಾಷ್ಟ್ರಪತಿಗಳ ಆಂಗೀಕಾರ ದೊರೆತಿದೆಯೆಂದು ಪತ್ರಿಕೆಯಲ್ಲಿ ಹೇಳಿಕೆ ಕೊಟ್ಟಿದ್ದೀರಿ. ಜಿಲ್ಲಾ ಪರಿಷತ್ ಚುನಾವಣೆಯನ್ನು ಮಾಡುವಂತಹ ಸಂದರ್ಭದಲ್ಲಿ ಈ ಸಲಹಾ ಸಮಿತಿಗಳನ್ನು ಮಾಡಿರತಕ್ಕಂಥದ್ದರಲ್ಲಿ ರಾಜಕೀಯ ಹಿನ್ನೆಲೆಯನ್ನಿಟ್ಟುಕೊಂಡು ಮಾಡಿದ್ದೀರೆಂದು ನಾನು ಹೇಳಬೇಕಾಗಿದೆ. ಇದಕ್ಕೆ ಸಂಪೂರ್ಣವಾಗಿ ಸರ್ಕಾರದ ಯಂತ್ರವನ್ನು ಬಳಸಿಕೊಳ್ಳುತ್ತಿದ್ದೀರಿ. ತಮ್ಮ ಪಕ್ಷದ ಕಾರ್ಯಕರ್ತರಿಗೆ ಅನುಕೂಲ ಮಾಡುವುದಕ್ಕೋಸ್ಕರ ಈ ರೀತಿ ಮಾಡುತ್ತಿದ್ದೀರಿ, ಇದರಿಂದ ಯಾವ ಕೆಲಸ ಕಾರ್ಯಗಳನ್ನು ಮಾಡುವುದಕ್ಕಾಗುವುದಿಲ್ಲ. ಮಾನ್ಯ ವೀರಪ್ಪ ಮೊಯಿಲಿ ಹೇಳಿದ ಹಾಗೆ ಕರ್ನಾಟಕ ಡೆವಲಪ್‌ಮೆಂಟ್ ಕಮಿಟಿ ಇದೆ. ಇದಕ್ಕೆ ಶಾಸಕರು ಅಧ್ಯಕ್ಷರಾಗಿರುತ್ತಾರೆ. ಈ ಸಮಿತಿಯಂತರು ಈ ಸಮಸ್ಯೆಗಳನ್ನು ವಿಚಾರಮಾಡುವುದಕ್ಕೆ ಅವಕಾಶ ಇದೆ. ಆ ಸಮಿತಿಗಳಿಗೆ ಈ ಜವಾಬ್ದಾರಿಯನ್ನು ಏತಕ್ಕೆ ಕೊಟ್ಟಿಲ್ಲ. ಮೇಲ್ಮನೆಯಲ್ಲಿ ಈ ವಿಷಯ ಚರ್ಚೆ ಆಗುವಾಗ ಜನ ಪರವಾದ ಭಾವನೆಗಳನ್ನು ಮಾನ್ಯ ಸದಸ್ಯರುಗಳು ವ್ಯಕ್ತಮಾಡಿದ್ದಾರೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕು. ತಾವು ಕೂಡ ಈ ವಿಷಯವನ್ನು ವಿವರವಾಗಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಆಬ್ದುಲ್ ನಜೀರ್ ಸಾಬ್.—ಸನ್ಮಾನ್ಯ ಅಧ್ಯಕ್ಷರೇ ಜನ ತಂತ್ರ ವಿಶ್ಲೇಷಣೆಯಾಗಲಿ ಅಧಿಕಾರ ದುರುಪಯೋಗದ ವಿಶ್ಲೇಷಣೆಯಾಗಲಿ ಮಾಡತಕ್ಕದು ಈ ಸಂದರ್ಭದಲ್ಲಿ ಉಚಿತವಲ್ಲವೆಂದು ನನ್ನ ಅಭಿಪ್ರಾಯ. ಎಲ್ಲಿ ಜನತಂತ್ರ ವ್ಯವಸ್ಥೆ ಇರುವುದಿಲ್ಲವೋ ಅಂತಹ ಕಡೆ ಅನೇಕ ಕಾರಣದಿಂದ ನೌಕರಶಾಹಿಯನ್ನು ಹಾಕುವುದಕ್ಕೆ ಬದಲಾಗಿ ಖಾಸಗಿ ವ್ಯಕ್ತಿಗಳನ್ನು ಅಧಿಕಾರಿಗಳಿಗೆ ಬದಲಾಗಿ ಹಾಕುವುದು ಒಳ್ಳೆಯದು. ಅವರ ಮೂಲಕ ಸಮಸ್ಯೆಗಳನ್ನು ಬಗೆಹರಿಸುವುದು ಸೂಕ್ತ ಎನ್ನುವ ಉದ್ದೇಶದಿಂದ ಈ ಸಲಹಾ ಸಮಿತಿಗಳನ್ನು ಮಾಡಬೇಕು ಎನ್ನುವ ಕಾರ್ಯಕ್ರಮಗಳನ್ನು ಮಾಡಲಾಗಿದೆ. ಪಾರ್ಲಿಮೆಂಟ್ ಚುನಾವಣೆ ಮುಂಚೆ ತೀರ್ಮಾನ ಮಾಡಲಾಗಿತ್ತು. ಅನಂತರ ವಿಧಾನಸಭೆಯ ಚುನಾವಣೆ ಬಂದುವು. ಎಲ್ಲಾ ಸದಸ್ಯರುಗಳಿಗೆ ಕೂಡ ಹೆಸರನ್ನು ಕೊಡಬೇಕೆಂದು ಪತ್ರ ಬರೆದಿದ್ದೆವು. ಯಾರಿಗೂ ಅವಮಾನ ಮಾಡುವಂತಹ ಉದ್ದೇಶ ಇದರಲ್ಲಿ ಇಲ್ಲ. ೧೯೭೮ರಲ್ಲಿ ಮಾನ್ಯ ವೀರಪ್ಪ ಮೊಯಿಲಿ ಮತ್ತು ಶ್ರೀನಿವಾಸ್ ರವರು ಸರ್ಕಾರದಲ್ಲಿ ಇದ್ದರು. ನಮ್ಮ ಕ್ಷೇತ್ರವಾದ ಗುಂಡ್ಲುಪೇಟೆಯಲ್ಲಿ ಲ್ಯಾಂಡ್ ಗ್ರ್ಯಾಂಟ್ ಕಮಿಟಿಯಲ್ಲಿ ನಮ್ಮ ಹೆಸರುಗಳನ್ನು ಹಾಕಿರಲಿಲ್ಲ. ಯಾವುದೇ ಪಕ್ಷ ಅಧಿಕಾರಕ್ಕೆ ಬಂದರೂ ಆ ಪಕ್ಷದ ಜನರಿಗೆ ಬಹುಮತದ ಮೂಲಕ ಪ್ರಾತಿನಿಧ್ಯ ಕೊಡುವುದಕ್ಕೆ ಅವಕಾಶ ಇದೆ, ೧೫೫ ಜನರ ಹೆಸರುಗಳನ್ನು ತರಿಸಿಕೊಂಡು ಅವಮಾನ ಮಾಡುವಂತಹದು ಏನು ನಡೆದಿಲ್ಲಾ. ಈಗಾಗಲೇ ಮೇಲ್ಮನೆಯಲ್ಲಿಯೂ ಕೂಡ ಈ ವಿಷಯ ಚರ್ಚೆಯಾಗಿದೆ. ಎಲ್ಲಾ ವಿರೋಧ ಪಕ್ಷದ ನಾಯಕರ ಜೊತೆಯಲ್ಲಿ ಮುಕ್ತ ಮನಸ್ಸಿನಿಂದ ಈ ವಿಷಯವನ್ನು ಚರ್ಚೆಮಾಡೋಣ. ಈ ಸಭೆಯಲ್ಲಿ ಅರ್ಧಗಂಟೆ ಕಾಲ ಚರ್ಚೆ ಮಾಡೋಣ ಈ ಸಭೆಯ ಕಾರ್ಯಕ್ರಮ ಮುಂದುವರಿಸಿಕೊಂಡು ಹೋಗಿ ಈ ನಿಲುವಳಿ ಸೂಚನೆಗೆ ಬದಲಾಗಿ ಬೇರೆ ರೀತಿಯಲ್ಲಿ ತೆಗೆದುಕೊಂಡು ಬಂದರೆ ನಾನು ಉತ್ತರ ಕೊಡುವುದಕ್ಕೆ ಸಿದ್ಧನಿದ್ದೇನೆ.

ಆ ವಿಷಯದಲ್ಲಿ ಇನ್ನೂ ಬೇಕಾದರೆ ಕುಳಿತು ಮಾತನಾಡೋಣ ಎನ್ನುವ ಮಾತನ್ನು ಹೇಳುತ್ತೇನೆ.

ಶ್ರೀ ಕೆ.ಎಚ್. ಪಾಟೀಲ್.—ವಿರೋಧ ಪಕ್ಷದವರು ಈ (ಬೇಡಿಕೆಯನ್ನು) ಮಾಗಣಿಯನ್ನು ಬೇಡಂವಾಗ ವಿತಕ್ಕಾಗಿ ಬೇಡಿದರು ಅಂದರೆ ವಿರೋಧಪಕ್ಷದವರು ಈಗ ಅಧಿಕಾರದಲ್ಲಿದ್ದಾರೆ ಎನ್ನುವ ಉದ್ದೇಶ ಇಂದಲೇ ಹೊರತು ಅವರನ್ನು ಟೀಕೆ ಮಾಡಬೇಕೆಂಬ ಉದ್ದೇಶದಿಂದ ಅಲ್ಲ. ಮಾನ್ಯ ನಜೀರ್‌ಸಾಬ್‌ರವರು ಬಹಳ ಚೆನ್ನಾಗಿ ಜನರ ಕಲ್ಯಾಣವನ್ನು ಮಾಡಬೇಕೆಂಬ ಉದ್ದೇಶದಲ್ಲಿದ್ದಾರೆ. ಆದರೆ ಅವರು ಹಾಕಿಕೊಂಡಿರತಕ್ಕಂತಹ ತತ್ವಗಳನ್ನು ನೋಡಿದರೆ ಯಾರು ಅಧಿಕಾರದಲ್ಲಿದ್ದಾರೋ ಅಂಥವರನ್ನೇ ಹಾಕಿಕೊಳ್ಳುತ್ತೇವೆ ಎಂದು ಹೇಳಿದರೆ ತಪ್ಪಾಗುತ್ತದೆ. ಒಂದು ವೇಳೆ ಹಿಂದೆ ಮಾಡಿರಬಹುದು, ಹಿಂದೆ ಮಾಡಿದೆ

ಕೆಟ್ಟ ಉದಾಹರಣೆಗಳನ್ನು ಈಗ ಸಾಧಿಸುವುದು ಸರಿಯಲ್ಲ. ಇವೊತ್ತು ಎನ್‌ಆರ್‌ಇಪಿ, ಬಿಪಿಎಪಿ ಸ್ಕೀಮ್‌ನಲ್ಲಿ ಸೆಂಟ್ರಲ್ ಗವರ್ನಮೆಂಟ್‌ನವರು ಪುಲ್ ಗ್ರಾಂಟ್ ಕೊಡುತ್ತಾರೆ. ಹಾಗಾದರೆ ಸೆಂಟ್ರಲ್‌ನವರು ಎಲ್ಲಾ ತಮ್ಮ ತಮ್ಮ ಎಮ್.ಪಿ.ಗಳನ್ನು ಸೇರಿಸಿ ಒಂದು ಸಮಿತಿಯನ್ನು ಮಾಡಿ ಹಾಕಿಬಿಟ್ಟರೆ ಆಗ ಮಂತ್ರಿಗಳಿಗೆ ಅವಕಾಶ ಇಲ್ಲದ ಹಾಗಾಗುತ್ತದೆ. ಅಂದರೆ ಅದಕ್ಕೆ ಬರುವುದಿಲ್ಲ, ಇದಕ್ಕೆ ಬರುತ್ತದೆ ಎಂದರೆ ಹೇಗಾಗುತ್ತದೆ? ಅದುದರಿಂದ ಹೀಗೆ ಮಾಡಿದರೆ ಹೇಗೇ? ಅಧಿಕಾರ ಇರುವುದು ಕ್ಷಣಿಕ, ತತ್ವಗಳು ಬಹಳ ದೊಡ್ಡವಾಗುತ್ತವೆ. ರೂಲ್ಸ್ ಮತ್ತು ಸಂವಿಧಾನವನ್ನು ನೋಡಿದರೆ ಇದಕ್ಕಿಂತಲೂ ಹೆಚ್ಚಿನ ಮಹತ್ವದ ವಿಷಯ ಅಡ್ಜರ್ನ್‌ಮೆಂಟ್ ಮೋಷನ್‌ಗೆ ಇಲ್ಲ. ಆದರೂ ಸಹ ಮಾನ್ಯ ನಜೀರ್ ಸಾಬ್‌ರವರು ವಿನಂತಿ ಮಾಡಿಕೊಳ್ಳುವ ಪ್ರಕಾರ ಈ ಸದನದ ಸದಸ್ಯರು ಹಠ ಹಿಡಿದು ಅಡ್ಜರ್ನ್‌ಮೆಂಟ್ ಮೋಷನ್ ಅಲ್ಲದೇನೇ ಬೇರೆ ರೀತಿಯಿಂದ ಅವರ ವಿಚಾರಕ್ಕೆ ಕಲ್ಪನೆ ಮಾಡಿಕೊಡುತ್ತೇವೆಂದು ಹೇಳಿದ್ದಾರೆ ಸ್ಪೀಕರ್ ಮೇಲೆ ಬಿಟ್ಟಿದ್ದಾರೆ ಅವರು ಇನ್ನೂ ಒಂದು ಯೋಗ್ಯ ಸಲಹೆಯನ್ನು ಮಾಡಿದ್ದಾರೆ, ಯಾರೂ ವ್ಯರ್ಥವಾಗಿ ಕಾಲಹರಣ ಮಾಡುವುದು ಬೇಡ ನಿಜವಾಗಿಯೂ ಇದರೊಳಗೆ ತಮಗೆ ಕನ್ವಿನ್ಸ್ ಆಗುವ ಹಾಗೆ ತತ್ವಗಳ ಆಧಾರದ ಮೇಲೆ ನಾವು ಬಿಡುತ್ತೇವೆಂದೂ. ನಿಜವಾಗಿಯೂ ಯೋಗ್ಯವಾದಂತಹ ಮಾರ್ಗದರ್ಶನವನ್ನು ತಾವು ಮಾಡುವುದು ಅವಶ್ಯ. ಅವರು ಹೇಳಿದ ಹಾಗೆ ಅರ್ಧತಾಸು ತಮ್ಮ ಚೇಂಬರ್‌ನಲ್ಲಿ ಕುಳಿತುಕೊಂಡು ಮಾತನಾಡೋಣ. ಪಂತ್ರಿಪರ್ಯಾರು, ವಿರೋಧ ಪಕ್ಷದವರು ಎಲ್ಲರೂ ಕೂಡಿ ಯೋಗ್ಯವಾದಂತಹ ನಿರ್ಣಯವನ್ನು ಮಾಡಿದರೆ ಅದು ಸರಿಯಾಗುತ್ತದೆ ಎಂದು ನನ್ನ ಭಾವನೆ,

ಅಧ್ಯಕ್ಷರು.—ಅವರು ಹೇಳಿದ್ದಾರೆ, ನಿವ್ಯಾನ್ನು ವಿರೋಧಪಕ್ಷದ ಮುಖಂಡರನ್ನು ಕರೆಸಿ ಚರ್ಚೆ ಮಾಡುತ್ತೇವೆಂದು ಹೇಳಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಚರ್ಚೆ ಮಾಡುವುದಕ್ಕಿಂತ ಮುಂಚೆ ಒಂದು ನಿರ್ಣಯವನ್ನು ಅವರು ತೆಗೆದುಕೊಂಡರೆ ಚರ್ಚೆ ಮಾಡುವಂತಹ ಅವಶ್ಯಕತೆ ಇಲ್ಲ.

ಅಧ್ಯಕ್ಷರು.—ನಿವ್ಯೊಂದಿಗೆ ಚರ್ಚೆ ಮಾಡುತ್ತೇನೆಂದು ಹೇಳಿದ್ದಾರೆ.

ಶ್ರೀ ಕೆ. ಎಚ್ ಪಾಟೀಲ್.—ಸ್ಪೀಕರ್‌ರವರ ಚೇಂಬರ್ ಅಂದರೆ ಮಂತ್ರಿಮರ್ಯಾರುಗಳಿಗೂ ಮತ್ತು ತಮಗೂ ಗೌರವಾದುದು ವಿಚಾರ ಮಾಡುವಾಗ ಕೆ.ಎಚ್. ಪಾಟೀಲ್ ಮತ್ತು ನಜೀರ್‌ಸಾಬ್‌ರವರು ಕುಳಿತು ವಿಚಾರ ಮಾಡುವುದು ಬೇರೆ, ಆದರೆ ಸ್ಪೀಕರ್‌ರವರು ಎದುರಿಗೆ ಇರುವಾಗ ಕುಳಿತು ಕೊಂಡು ಮಾತನಾಡುವುದು ಬೇರೆ. ಸ್ಪೀಕರ್‌ರವರು ಜಡ್‌ಮೆಂಟ್ ಕೊಡಲಿಕ್ಕಾಗಿ ಇರುತ್ತೀರಿ. ಯಾರು ಹೇಳುತ್ತಿರುವುದು ಮುಖ್ಯವಾದುದು ಎಂದು ಜಡ್‌ಮೆಂಟ್ ಕೊಡುತ್ತಾರೆ.

ಅಧ್ಯಕ್ಷರು.—ಮೊದಲು ನೀವೆಲ್ಲರೂ ಚರ್ಚೆ ಮಾಡಿ. ಹಾಗೆ ಮಾಡಿದರೆ ಇತ್ಯರ್ಥ ಆಗುತ್ತದೆಂದು ನಾನು ಹೇಳುವುದು. ಮಾನ್ಯ ಬಂಗಾರಪ್ಪನವರು ಮತ್ತು ಮಾನ್ಯ ಮೊಯಿಲಿಯವರು ಎಲ್ಲರೂ ಇದ್ದಾರೆ

ಶ್ರೀ ಕೆ.ಎಚ್. ಪಾಟೀಲ್.— ಆ ಚರ್ಚೆಯಲ್ಲಿ ನಾವು ಸಂಪೂರ್ಣ ವಿಫಲರಾಗಿದ್ದೇವೆ ಎಂದು ನಾವು ಇಲ್ಲಿ ಹೇಳುತ್ತಾ ಇರುವುದು. ಇಲ್ಲದಿದ್ದರೆ ಈ ನಿಲುವಳಿ ಸೂಚನೆ ತರುವ ಅವಶ್ಯಕತೆ ಇರಲಿಲ್ಲ.

ಅಧ್ಯಕ್ಷರು.—ಇವೊತ್ತು ಸಾಯಂಕಾಲ ಅಥವಾ ನಾಳೆ ಬೆಳಿಗ್ಗೆ ಕರೆಯೋಣ.

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ನಜೀರ್‌ಸಾಬ್‌ರವರು ಬಹಳ ಕೂಲಂಕಷವಾಗಿ, ಬಹಳ ತೀವ್ರವಾಗಿ ಈ ಚುನಾವಣೆಯನ್ನು ಮಾಡಬೇಕೆಂದು ಆಶೆ ಪಟ್ಟರು. ತಡವಾಗುತ್ತದೆ ಎಂದು ಇವರು ಹೇಳುತ್ತಾರೆ, ತಡವಾಗುವುದಿಲ್ಲ ಎಂದು ಕೇಂದ್ರದವರು ಹೇಳುತ್ತಾರೆ,

ಅಧ್ಯಕ್ಷರು.—ಎರಡೂ ಕಡೆಯವರು ಸೇರಿ ಮಾತನಾಡಿರಿ.

(ಗೊಂದಲ)

ಶ್ರೀ ಕೆ.ಎಚ್. ಪಾಟೀಲ್.—ನಮ್ಮ ಪಕ್ಷ ಇರತಕ್ಕಂತಹ ಕೇಂದ್ರದಲ್ಲಿ ಇವರ ಬಿಲ್ಲಿಗೆ ಮಂಜೂರು ಕೊಡುವುದಕ್ಕೆ ತಡವಾಯಿತು. ಇವರ ಪಕ್ಷ ಪ್ರಭಲವಾಗಿರತಕ್ಕಂತಹ ಸರಕಾರದೊಳಗೆ ಏಳು ತಿಂಗಳಾದರೂ ಸಹಿತ ಮಂಜೂರು ಕೊಟ್ಟಿರುವುದು ಅಮಲಿಗೆ ಬರುವುದಕ್ಕೆ ತಡವಾಗಿದೆ. ಆವಾಗ ಸಹ ನಾವು ಇವರ ಉತ್ಸುಕತೆಯನ್ನು ನೋಡಿ ಬೆಂಬಲವನ್ನು ಕೊಟ್ಟಿದ್ದೇವೆ. ಇವೊತ್ತು ಚುನಾವಣೆಯನ್ನು ಒಂದೇ ತಿಂಗಳೊಳಗಾಗಿ ಮಾಡಲಿಕ್ಕೆ ನಮ್ಮದೇನೂ ತಕರಾರು ಇಲ್ಲ. ಚುನಾವಣೆ ಮಾಡುವ ಕಾಲಕ್ಕೆ ಅವಸ್ಥರ

ಎಳೆಯುವ ಹಾಗೆ ನಾಮಿನೇಶನ್ ಏಕಾಗಿ ಮಾಡುತ್ತೀರಿ? ಇವೊತ್ತು ನೀವು ಅಧಿಕಾರದಲ್ಲಿದ್ದೀರಿ, ಆದಕ್ಕಾಗಿ ಆ ಜನರು ನಿಮ್ಮ ಪಕ್ಷದವರು ಎಂದು ಹೇಳುತ್ತಿರುತ್ತಾರೆ. ಅವರುಗಳು ಯಾವ ಸರಕಾರ ಇರುತ್ತದೋ ಆ ಪಕ್ಷದವರು, ಹಾಗೆ ಹೀಗೆ ಹೇಳಿಕೊಂಡು ನಾಮಿನೇಷನ್ ಹೊಡೆದುಕೊಳ್ಳುತ್ತಾರೆ. ನಿಮ್ಮ ಪಕ್ಷದವರು ಎಂದು ಹೇಳಿಕೊಳ್ಳುತ್ತಾರೆ. ನಾಮಿನೇಷನ್ ಮಾಡಿರುವವರು ನಿಜವಾಗಿ ನಿಮ್ಮ ಪಕ್ಷದವರೇ ಎಂದು ನೋಡಿ. ಅವರು ನಿಮ್ಮ ಪಕ್ಷದ ಸದಸ್ಯರೇ ಎಂದು ನೋಡಿಕೊಳ್ಳಿ. ನನ ಅಭಿಪ್ರಾಯದಲ್ಲಿ ಅವರೆಲ್ಲರೂ ಕಾರ್ಯಸಾಧಕರು. ಆವರವರ ಕಾರ್ಯ ಸಾಧನೆಯು ಸಲುವಾಗಿ ನಿಮ್ಮ ಪಕ್ಷದವರು ಎಂದು ಹೇಳುತ್ತಾರೆ ಅಷ್ಟೆ. ನೀವು ಇನ್ನೂ ಸಹ ಬರಗಾಲ ಪರಿಹಾರ ಕಾಮಗಾರಿಗಳನ್ನು ಪ್ರಾರಂಭ ಮಾಡಲಿಲ್ಲ. ನಿಮಗೆ ಏಕೆ ಹಣ ಬೇಕು? ಯಾಕಾಗಿ ನೀವು ಹಣವನ್ನು ಖರ್ಚುಮಾಡುತ್ತಿದ್ದೀರಿ ಇದರಿಂದ ಏನು ಪ್ರಯೋಜನ ಆಗುತ್ತದೆ? ಒಂದು ಆಡ್ವೈಸರಿ ಕಮಿಟಿಯನ್ನು ನೀವು ಮಾಡುವ ಹಾಗಿದ್ದರೆ ೫–೧೦ ಮಂದಿಯ ಕಮಿಟಿಯನ್ನು ನೀವು ಮಾಡಿಕೊಳ್ಳಿ ಮತ್ತು ಹೇಗೆ ಕೆಲಸ ಮಾಡಬೇಕೆನ್ನುವುದನ್ನು ನೀವು ನಿಕಾಲಿ ಮಾಡಿಕೊಳ್ಳಿ. ಚುನಾವಣೆಗೆ ನೀವು ಕ್ಷೇತ್ರವನ್ನು ತಯಾರು ಮಾಡುವಾಗ ನೀವು ಎಲ್ಲರನ್ನೂ ಕರೆದು ಕೇಳುತ್ತೇನೆ ಎಂದು ಹೇಳಿದ್ದೀರಿ. ಅದು ಸರಿಯಾದುದು. ಆದರೆ ಒಂದು ವೇಳೆ ಕರೆದು ಕೇಳದೇ ಮಾಡಿದರೆ ಆ ಅಪಕೀರ್ತಿಯನ್ನು ನೀವು ಗಳಿಸಿಕೊಳ್ಳಬಾರದು ಎಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಮಾನ್ಯ ನಜೀರ್‌ಸಾಬ್‌ರವರೇ ಚರ್ಚೆಗೆ ಕರೆಯುತ್ತೇನೆಂದು ಹೇಳಿದ್ದಾರಲ್ಲ, ಅದು ಯಾವಾಗ ಎಂದು ಹೇಳಿಬಿಡಿ.

ಶ್ರೀ ಅಬ್ದುಲ್ ನಜೀರ್‌ಸಾಬ್.—ನಾನು ಚರ್ಚೆಗೆ ಯಾವಾಗಲೂ ಸಿದ್ಧ. ಈಗ ಬೇಕಾದರೂ ಕರೆಯಲು ಸಿದ್ಧನಾಗಿದ್ದೇನೆ.

ಅಧ್ಯಕ್ಷರು.—ಅರ್ಧ ಘಂಟೆಯಲ್ಲಿ ಮಾಡೋಣ.

ಶ್ರೀ ಎಸ್. ಬಂಗಾರಪ್ಪ.—ಸರಕಾರದ ಪರವಾಗಿ ಮಾನ್ಯ ಮಂತ್ರಿಯವರು ಹೇಳಿದ್ದಾರೆ, ಎಲ್ಲಾ ವಿರೋಧಪಕ್ಷದ ಮುಖಂಡರುಗಳನ್ನು ಕರೆದು ಮಾತುಕತೆ ಮಾಡುವಂತಹ ವಿಚಾರ ಬಹಳ ಸಂತೋಷ ವಾದುದು. ತಮ್ಮ ಕೊರಡಿಗೆ ಬರುವಂತಹ ಆಶೆ ನಮಗೂ ಇದೆ, ಅವರಿಗೂ ಇದೆ. ಚರ್ಚೆ ಮಾಡುವಂತಹ ವಿಷಯದಲ್ಲಿ ಬೇಡ ಎಂದು ನಾನು ಹೇಳುವುದಿಲ್ಲ. ಈ ಸಂದರ್ಭದಲ್ಲಿ ಅಲ್ಲಿಯವರೆಗೆ ಈ ಸದನವನ್ನು ತಾವು ಮುಂದಕ್ಕೆ ಹಾಕಬೇಕಾಗುತ್ತದೆ. ಏಕೆಂದರೆ, ಇನ್ನೂ ಕೂಡಾ ಕೆಲವು ತಾಲ್ಲೂಕ್‌ಗಳಿಗೆ ಸಂಬಂಧಪಟ್ಟಹಾಗೆ ಆರ್ಡರ್ಸ್, ಇಶ್ಯೂ ಮಾಡತಕ್ಕಂತಹ ಸ್ಟೇಜ್‌ನಲ್ಲಿ ಇರುವುದರಿಂದ ಕೆಲವು ವಿಚಾರಗಳು ಇರುತ್ತವೆ. ಈಗ ದಯವಿಟ್ಟು ತಾವುಗಳು ಹೇಳಬೇಕು, ನಮ್ಮ ಮಾತುಕತೆ ಅಂತಿಮವಾಗಿ ಮುಗಿದಂ ತೀರ್ಮಾನ ಆಗಬೇಕು. ಆದರೆ ಮಾತುಕತೆಯು ಯಾವ ರೂಪದಲ್ಲಿ, ಯಾವ ರೀತಿಯಲ್ಲಿ ಬರುತ್ತದೆ ಎಂದು ನಮಗೆ ಗೊತ್ತಿಲ್ಲ.

ಶ್ರೀ ಅಬ್ದುಲ್ ನಜೀರ್‌ಸಾಬ್.—ಮಾತುಕತೆಗೆ ಈಗಲೇ ಬಂದರೆ ನಾನು ತಯಾರಾಗಿದ್ದೇನೆ.

ಶ್ರೀ ಎಸ್. ಬಂಗಾರಪ್ಪ —ಅಂತಿಮವಾದ ತೀರ್ಮಾನ ಏನು ಮಾತುಕತೆಯಲ್ಲಿ ಬರುತ್ತದೋ. ಆದು ಬರುವವರೆಗೆ ಉಳಿದಿರುವಂತಹ ತಾಲೂಕುಗಳಿಗೆ ಏನು ಮಾಡಬೇಕೆಂದು, ನಾವುಗಳು ಕುಳಿತು ಕೊಂಡು ಮಾತನಾಡೋಣ. ಅದಕ್ಕಾಗಿ ನೀವು ಯಾವ ಆಜ್ಞೆಯನ್ನೂ ಹೊರಡಿಸುವುದಿಲ್ಲ ಎಂದು ಮಾಡಬೇಕು. ಅದಕ್ಕೆ ನೀವು ಒಪ್ಪಿಕೊಳ್ಳುತ್ತೀರಾ ? ಎನ್ನುತಕ್ಕಂತಾದ್ದು ಇರುವ ವಿಷಯ,

ಅಧ್ಯಕ್ಷರು.—ಇನ್ನು ಮುಂದೆ ಯಾವ ಆಜ್ಞೆಯನ್ನು ಮಾಡುವುದಿಲ್ಲ ಎಂದು ಹೇಳಿದ್ದಾರೆ.

ಶ್ರೀ ಅಬ್ದುಲ್ ನಜೀರ್‌ಸಾಬ್.—ಆರ್ಡರ್ ಮಾಡುವ ಸ್ಟೇಜ್‌ನಲ್ಲಿ ಯಾವುದೂ ಇಲ್ಲ ಸ್ವಾಮಿ. ಅಷ್ಟನ್ನು ನಾನು ಹೇಳಿದ್ದೇನೆ.

ಅಧ್ಯಕ್ಷರು.—ಆರ್ಡರ್ ಸ್ಟೇಜ್‌ನಲ್ಲಿ ಯಾವುದೂ ಇಲ್ಲ. ಅಂದರೆ ಆರ್ಡರ್ ಮಾಡುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ನಾನು ಒಂದು ಮಾತು ಹೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಹಾಗಾದರೆ ಎಲ್ಲಾ ಇಸ್ಯೂ ಆಗಿವೆ ಎಂದು ಅರ್ಥವೇ?

೧–೦೦ ಪಿ.ಎಂ.

ಗೊಂದಲ

ಶ್ರೀ ಎಸ್. ಬಂಗಾರಪ್ಪ.— ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರ ಹಕ್ಕಿಗೆ ಅಡ್ಡಿ ಬರತಕ್ಕಂತಹ ಉದ್ದೇಶ ನಮಗಿಲ್ಲ. ಆ ಕಡೆ ಈ ಕಡೆ ಇರತಕ್ಕಂತಹ ಸದಸ್ಯರುಗಳು ಈ ವಿಷಯದ ಮೇಲೆ ಮಾತನಾಡುವುದಕ್ಕೆ ಸಿದ್ಧರಿದ್ದಾರೆ. ಚರ್ಚೆಗೆ ಅವಕಾಶ ಮಾಡಿಕೊಡಿಯೆಂದು ಅವರೂ ಹೇಳುತ್ತಿದ್ದಾರೆ. ನಾವು ಕೇಳುತ್ತಿದ್ದೇವೆ. ಆದುದರಿಂದ ತಾವು ಮೊದಲು ಕಾರ್ಯಕಲಾಪಗಳನ್ನು ಮುಂದಕ್ಕೆ ಹಾಕಿ ಈ ಚರ್ಚೆಗೆ ಅವಕಾಶ ಮಾಡಿಕೊಡಬೇಕು. ಮಾನ್ಯ ಸಚಿವರು ಒಂದು ಮಾತನ್ನು ಆಡಿದ್ದಾರೆ, ಸಲಹಾ ಸಮಿತಿಗಳನ್ನು ಮಾಡಿದರೆ, ಅದು ಪ್ರಜಾಪ್ರಭುತ್ವ ನೀತಿಗೆ ವಿರುದ್ಧವಾಗುವುದಿಲ್ಲವೆಂದು ಹೇಳಿದ್ದಾರೆ. ೧೯೫೮ನೇ ಇಸವಿಯಲ್ಲಿ ತಾಲ್ಲೂಕು ಬೋರ್ಡ್ ಮಂಡಳಿಗಳು, ತಾಲ್ಲೂಕು ಪಂಚಾಯತ್ ಸಮಿತಿಗಳ ಆಕ್ಟ್ ಪಾಸಾಗಿ ಬಂದಮೇಲೆ ಸಲಹಾ ಸಮಿತಿಗಳನ್ನು ಅವತ್ತು ಮಾಡಿರಲಿಲ್ಲ. ೧೯೫೯ರಲ್ಲಿ ಕಾನೂನು ಬಂದ ಕೂಡಲೇ ಚುನಾವಣೆ ಮಾಡಿದರು. ನಿಮ್ಮ ಹಾಗೆ ಸಲಹಾ ಸಮಿತಿಗಳನ್ನು ಮಾಡುವುದಕ್ಕೆ ಹೋಗಲಿಲ್ಲ. ೧೯೭೬ರಲ್ಲಿ ತಾಲ್ಲೂಕು ಅಭಿವೃದ್ಧಿ ಮಂಡಳಿಗಳ ಅವಧಿ ಮುಕ್ತಾಯವಾಯಿತು. ೨ ವರ್ಷಗಳ ಕಾಲ ಅದೇ ಸದಸ್ಯರನ್ನು ಮುಂದುವರಿಸಲಾಯಿತು ನೀವು ಬೇಕಾಗಿದ್ದರೆ ಮುಂದುವರಿಸಬಹುದಾಗಿತ್ತು. ತಾವು ತಾಲ್ಲೂಕು ಸಲಹಾ ಸಮಿತಿಗಳನ್ನು ಮಾಡತಕ್ಕಂತಹ ವಿಚಾರ ಮಾಡಿದ್ದೀರಿ. ಆದರೆ ಇದು ಪ್ರಜಾ ಪ್ರಭುತ್ವದ ನೀತಿಗನುಗುಣವಾದುದಲ್ಲ. ಅಮೇರಿಕಾ ದೇಶದಲ್ಲಿನ ಪದ್ಧತಿಯ ಪ್ರಕಾರ ಮಾಡುವುದಕ್ಕೆ ಸಾಧ್ಯವೇ?

ಶ್ರೀ ಅಬ್ದುಲ್ ನಜೀರ್‌ಸಾಬ್.— ಒಂದು ಮಾತು ಹೇಳುತ್ತೇನೆ, ಅಧ್ಯಕ್ಷರೇ, ಆಗ ಚುನಾವಣೆಗಳು ನಡೆದಿರಲಿಲ್ಲ. ೧೯೭೬–೭೮ರಲ್ಲಿ ತಾಲ್ಲೂಕು ಬೋರ್ಡುಗಳು ಎಲ್ಲಿದ್ದವು?

ಶ್ರೀ ಎ. ಚಿನ್ನಪ್ಪ.— ಸ್ವಾಮಿ, ನಾನೂ ಕೂಡ ತಾಲ್ಲೂಕು ಬೋರ್ಡ್ ಅಧ್ಯಕ್ಷನಾಗಿ ಕೆಲಸ ಮಾಡಿದ್ದೇನೆ. ನನಗೂ ಒಂದು ನಿಮಿಷ ಅವಕಾಶ ಕೊಡಿ.

ಅಧ್ಯಕ್ಷರು.— ದಯವಿಟ್ಟು ಕುಳಿತುಕೊಳ್ಳಿ.

ಗೊಂದಲ

ಶ್ರೀ ಎಸ್. ಬಂಗಾರಪ್ಪ.— ಮಾನ್ಯ ಅಧ್ಯಕ್ಷರೇ, ಇಷ್ಟೇ ವಿಚಾರ. ಈ ವಿಷಯವನ್ನು ಇತ್ಯರ್ಥ ಮಾಡುವ ಬಗ್ಗೆ ಮಾನ್ಯ ಸಚಿವರು ಹೇಳಿದ್ದಾರೆ. ಬಹಳ ಸಂತೋಷ, ಆದುದರಿಂದ ಈಗ ಸದನವನ್ನು ದಯವಿಟ್ಟು ಮುಂದಕ್ಕೆ ಹಾಕಿ. ಮಾತುಕತೆ ಮಾಡೋಣ, ಆಮೇಲೆ ಒಂದು ಇತ್ಯರ್ಥಕ್ಕೆ ಬರೋಣ, ಇಲ್ಲದಿದ್ದರೆ ಏನಾಗುತ್ತದೆಂದರೆ, ಈ ಸದನದಲ್ಲಿ ಆರ್ಡರ್ಸ್ ಇಷ್ಯೂ ಆಗತಕ್ಕ ಧಾಟಿ ವಿಧಾನಗಳನ್ನು ನೋಡಿದರೆ ತಾವು ಒಪ್ಪುತ್ತೀರಿ ಆದುದರಿಂದ ತಾವು ಸಭೆಯನ್ನು ಮುಂದಕ್ಕೆ ಹಾಕಿದರೆ ಅನುಕೂಲವಾಗುತ್ತದೆ, ತಮ್ಮ ಕೊಠಡಿಯಲ್ಲಿ ಕುಳಿತು ತೀರ್ಮಾನ ಮಾಡೋಣ. ಅಲ್ಲಿ ಕೂತು ಚರ್ಚೆ ಮಾಡಿ, ಒಂದು ತೀರ್ಮಾನಕ್ಕೆ ಬರೋಣ.

ಅಧ್ಯಕ್ಷರು.— ಸಭೆಯನ್ನು ಮುಂದಕ್ಕೆ ಹಾಕುವುದು ಬೇಡ.

ಶ್ರೀ ಅಬ್ದುಲ್ ನಜೀರ್‌ಸಾಬ್.— ತಮ್ಮ ಮುಖಾಂತರ ಒಂದು ಪ್ರಶ್ನೆ ಏನೆಂದರೆ, ನಾನು ಇದಕ್ಕೆ ಇನ್ನೂ ಏನೆಂದು ಉತ್ತರ ಹೇಳಲಿ.

ಅಧ್ಯಕ್ಷರು.— ಈ ದಿನ ಮಧ್ಯಾಹ್ನ ೩.೩೦ಕ್ಕೆ ಸಭೆ ಸೇರೋಣ. ನನ್ನ ಕೊಠಡಿಯಲ್ಲಿ ಮಧ್ಯಾಹ್ನ ಸಭೆ ಸೇರಿ, ಇತ್ಯರ್ಥ ಮಾಡೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಹಿಂದೆ ಈ ಸದನದಲ್ಲಿ ಈ ವಿಷಯ ಚರ್ಚೆಗೆ ಬಂದಾಗ ಸಲಹಾ ಸಮಿತಿಗಳನ್ನು ಮಾಡುತ್ತೀರಾ ಎಂದು ಕೇಳಿದ್ದಕ್ಕೆ ಯೋಚನೆ ಮಾಡುತ್ತೇವೆ ಎಂಬ ಮಾತನ್ನು ಹೇಳಿದ್ದರು.

ಶ್ರೀ ಅಬ್ದುಲ್ ನಜೀರ್ ಸಾಬ್.— ಯಾವತ್ತಿನಾಂಕವೆಂದು ಹೇಳಿ ಸ್ವಾಮಿ. ಹೋದಸಲವೆಂದರೆ ಯಾವಾಗ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಹೋದ ಅಧಿವೇಶನದಲ್ಲಿ ತಾವು ಹೇಳಿದ್ದಿರಿ. ಆ ಸಂದರ್ಭದಲ್ಲಿ ಅವರು ಸಲಹಾ ಸಮಿತಿಗಳನ್ನು ಮಾಡತಕ್ಕಂತಹ ಅಥವಾ ಬಿಡತಕ್ಕಂತಹ ಮಾತನ್ನು ಹೇಳಿದ್ದರು. ಈ ಮಧ್ಯೆ ರಾಷ್ಟ್ರಪತಿಗಳ ಅಂಕಿತ ಬಂದಮೇಲೆ ಪುನಃ ಸಲಹಾ ಸಮಿತಿಗಳನ್ನು ಮಾಡುವ ಅವಶ್ಯಕತೆ ಇಲ್ಲ. ಆ ಕಡೆ ೧೦ ಜನ ಈ ಕಡೆ ೫ ಜನ ಹಾಕತಕ್ಕಂತಹ ಕೆಲಸವನ್ನು ಯಾಕೆ ಮಾಡುತ್ತೀರಿ? ಅಡ್ವೈಸರಿ ಕಮಿಟಿ ಸದಸ್ಯರ ಮೇಲೆ ಏನೂ ಕ್ರಮ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಅಡ್ವೈಸರಿ ಕಮಿಟಿ ಸದಸ್ಯರ ಮೇಲೆ ದೂರು ಬಂದರೆ, ಅವರನ್ನು ತೆಗೆದುಹಾಕಬಹುದೇ ಹೊರತು, ಇನ್ನೇನೋ ಮಾಡುವುದಕ್ಕೆ ಆಗುವುದಿಲ್ಲ. ಆದುದರಿಂದ ಈ ವಿಷಯದ ಮೆರಿಟಿ–ಡಿಮೆರಿಟಿ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ಹೇಳುತ್ತೇನೆ. ಆದರೆ ಇದರ ಬಗೆ ತಮ್ಮ ಕೊಠಡಿಯಲ್ಲಿ ಚರ್ಚೆ ಮಾಡ ಬೇಕಾಗಿದ್ದರೆ, ಸದನವನ್ನು ಮುಂದಕ್ಕೆ ಹಾಕಿ.

ಅಧ್ಯಕ್ಷರು.— ೩.೩೦ಕ್ಕೆ ಈ ಬಗ್ಗೆ ಚರ್ಚೆ ಮಾಡೋಣ. ಸದನವನ್ನು ಮುಂದಕ್ಕೆ ಹಾಕುವುದು ಬೇಡ. ಆರ್ಡರ್ ಇಷ್ಯೂ ಮಾಡತಕ್ಕಂಥಾದ್ದು ಯಾವುದೂ ಇಲ್ಲವೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಸಭೆಯ ಕಾರ್ಯಕಲಾಪಗಳು ಮುಂದುವರಿಯಲಿ.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೆ, ಆ ಸದನದಲ್ಲಿ ಕೂಡ ಇದೇ ವಿಚಾರದಲ್ಲಿ ಚರ್ಚೆ ನಡೆಯುತ್ತಿದೆ ಈ ದಿನ ೩ನೇ ದಿನ, ಅಲ್ಲಿ ಚರ್ಚೆ ನಡೆಯುತ್ತಾ ಇರೋದು ತಮ್ಮ ಮಾತುಗಳಿಗೆ ಕೂಡ ಮನ್ನಣೆ ಕೊಡಬೇಕಾಗುತ್ತದೆ, ನಾವು ಕೊಡುತ್ತೇವೆ. ಈ ದಿನ ೩.೩೦ಕ್ಕೆ ತಾವು ಹೇಳಿದ ಹಾಗೆ, ಈ ಬಗ್ಗೆ ಮಾತುಕತೆ ಮಾಡುವ ಬಗ್ಗೆ ನಮ್ಮ ಒಪ್ಪಿಗೆ ಇದೆ. ಈ ಸಭೆಯಲ್ಲಿ ಕೂಡ ಶ್ರೀ ಅಬ್ದುಲ್ ನಜೀರ್ ಸಾಬ್‌ರವರು ಇದೇ ಹೇಳಿಕೆ ಕೊಟ್ಟರೆ, ಒಳ್ಳೆಯದಾಗುತ್ತದೆ. ತಮ್ಮ ಕೊಠಡಿಯಲ್ಲಿ ಮಧ್ಯಾಹ್ನ ಎಲ್ಲಾ ರಾಜಕೀಯ ಪಕ್ಷದ ನಾಯಕರನ್ನು ಕರೆಸಿ, ಮಾತುಕತೆ ಮಾಡುವುದು ಒಳ್ಳೆಯದು. ಮಾತುಕತೆಯು ಫಲ ಪ್ರದವಾಗಲಿಲ್ಲ ಎಂದರೆ, ನಮ್ಮ ನಿಲುವಳಿ ಸೂಚನೆ ಇನ್ನೂ ಜೀವಂತವಾಗಿದೆ ಎಂದು ಹೇಳುತ್ತಿದ್ದೇನೆ.

ಶ್ರೀ ಅಬ್ದುಲ್ ನಜೀರ್ ಸಾಬ್.— ಬೇರೆ ರೂಪದಲ್ಲಿ ತಂದರೆ ಉತ್ತರ ಕೊಡುತ್ತೇನೆ.

ಅಧ್ಯಕ್ಷರು.— ಮೊದಲು ನಿಮ್ಮ ನಿಮ್ಮಲ್ಲಿ ಇತ್ಯರ್ಥ ಮಾಡಿಕೊಳ್ಳಿ. ಸಮಸ್ಯೆ ಬಗೆಹರಿಯದಿದ್ದರೆ, ನಾನು ಮಧ್ಯೆ ಬರುತ್ತೇನೆ.

ಶ್ರೀ ಎಸ್. ಬಂಗಾರಪ್ಪ.— ಮತ್ತೆ ಮತ್ತೆ ತಾವು ಹೊಸ ಷರತ್ತನ್ನು ಹಾಕುವುದಕ್ಕೆ ಹೋಗ ಬೇಡಿ.

ಅಧ್ಯಕ್ಷರು.— ಆಕಸ್ಮಾತ್ ಬಗೆಹರಿಯದಿದ್ದರೆ, ನಾನು ಮಧ್ಯೆ ಬರುತ್ತೇನೆ.

ಶ್ರೀ ಎಸ್. ಬಂಗಾರಪ್ಪ.— ತಾವು ಲಾಲಿಸಬೇಕು.

ಅಧ್ಯಕ್ಷರು.— ಇತ್ಯರ್ಥವಾಗದಿದ್ದರೆ ಇಬ್ಬರನ್ನೂ ಕರೆಸಿ ಮಾತನಾಡೋಣ.

ಶ್ರೀ ಕೆ. ಹೆಚ್. ಪಾಟೀಲ್.— ಮಾನ್ಯ ಅಧ್ಯಕ್ಷರೇ ಈ ಸದನದಲ್ಲಿ ಮಾನ್ಯ ಸಭಾನಾಯಕರು ಇದ್ದಾರೆ. ಮಾನ್ಯ ವಿರೋಧ ಪಕ್ಷದ ನಾಯಕರು ಇದ್ದಾರೆ. ಮತ್ತು ಆ ಸದನದ ವಿರೋಧ ಪಕ್ಷದ ನಾಯಕರು ಇದ್ದಾರೆ. ಇವರೆಲ್ಲರನ್ನು ತಾವು ತಮ್ಮ ಕೊಠಡಿಯಲ್ಲಿ ಈಗಲೇ ಕರೆಸಿ ಒಂದು ಚಹ ತರಿಸಿ ಕೊಟ್ಟು ಈ ವಿಚಾರವನ್ನು ಬಗೆಹರಿಸಿದರೆ ಒಳ್ಳೆಯದು. ಈ ಸದನದ ಕಾರ್ಯಕಲಾಪಗಳನ್ನು ನಡೆಸುವುದಕ್ಕಾಗಿ ಯಾರಾದರೂ ಒಬ್ಬ ಛೇರ್ಮನ್‌ರವರನ್ನು ಇಟ್ಟು ಬೇಕಾದರೆ ತಾವು ಹೋಗಬಹುದು. ಇದು ಒಂದು ದೊಡ್ಡ ಸಮಸ್ಯೆಯಾಗಿ ಇಲ್ಲಿ ಚರ್ಚೆಯಾಗುತ್ತಿದೆ. ಮಾನ್ಯ ಸಚಿವರಾದ ಅಬ್ದುಲ್ ನಜೀರ್ ಸಾಬ್‌ರವರು, ಎರಡೂ ಸದನಗಳ ವಿರೋಧಪಕ್ಷದ ನಾಯಕರನ್ನು ಕರೆಸಿ ಚರ್ಚೆ ಮಾಡಿ ಒಂದು ಇತ್ಯರ್ಥಕ್ಕೆ ಬಂದರೆ ಒಳ್ಳೆಯದು ಅಲ್ಲಿ ನಡೆದಂತಹ ತೀರ್ಮಾನವನ್ನು ತಾವು ಇಲ್ಲಿ ಹೇಳಿದರೆ ಎಲ್ಲಾ ಸದಸ್ಯರಿಗೂ ಸಂತೋಷವಾಗಬಹುದು. ಸಭಾನಾಯಕರ ಮೇಲೆ ನಿಮಗೆ ವಿಶ್ವಾಸ ಇದೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದಂಥ ಶ್ರೀಮಾನ್ ಕೆ. ಹೆಚ್. ಪಾಟೀಲ್‌ರವರ ಸಲಹೆಯನ್ನು ಮತ್ತು ಅವರ ಅಭಿಪ್ರಾಯವನ್ನು ಆಗಾಗ ಆ ಪಕ್ಷದವರು ಕೇಳಿದರೆ ಸಮಸ್ಯೆಗಳು ಬಗೆಹರಿಯುತ್ತವೆ. ಸಾಮಾರು ಒಂದು ಗಂಟೆ ಹತ್ತು ನಿಮಿಷದಿಂದ ಈ

ಸದನದಲ್ಲಿ ವೃಥಾ ಕಾಲಹರಣವಾಗುತ್ತಿದೆ. ಯಾವುದೇ ಒಬ್ಬ ಸದಸ್ಯರಿಂದ ಏನಾದರೂ ಸಮಂಜಸವಾದಂಥ ಅಭಿಪ್ರಾಯ ಬಂದಾಗ ಸರ್ಕಾರ ಇದುವರೆವಿಗೂ ತಳ್ಳಿ ಹಾಕಿಲ್ಲ. ಆ ಕಾಲ ಹೊರಟು ಹೋಯಿತು. ಈಗ ಈ ಸದನದಲ್ಲಿ ಯಾವುದೇ ಸಮಂಜಸವಾದ ಸೂಚನೆ ಯಾರಿಂದಲೇ ಬಂದಿರಲಿ ಅಥವಾ ಸಾರ್ವಜನಿಕರಿಂದ ಬಂದಿರಲಿ ಅದನ್ನು ಸರ್ಕಾರ ತೆರದ ಮನಸ್ಸಿನಿಂದ ಪರಿಶೀಲನೆ ಮಾಡಿದ್ದೇವೆ. ಇದಕ್ಕೆ ಇಷ್ಟು ಉದ್ದದ ಭಾಷಣ ಮಾಡುವ ಅಗತ್ಯವಿಲ್ಲ. ಸಂಬಂಧಪಟ್ಟ ಮಂತ್ರಿಗಳು ಒಪ್ಪಿಕೊಂಡಿದ್ದಾರೆ. ಎದುರುಗಡೆಯ ಮಾನ್ಯ ವಿರೋಧಪಕ್ಷದ ನಾಯಕರ ಜೊತೆಯಲ್ಲಿ ಮಾತನಾಡೋಣವೆಂದು ಹೇಳಿದ್ದಾರೆ. ಆದರೂ ಕೂಡ ಈ ಸದನದ ಸಮಯವನ್ನು ಏತಕ್ಕೆ ಹಾಳು ಮಾಡಬೇಕು.

ಅಧ್ಯಕ್ಷರು.—ಮೂರುಮರೆ ಗಂಟೆಗೆ ನನ್ನ ಕೊಠಡಿಯಲ್ಲಿ ಈ ವಿಷಯವನ್ನು ಚರ್ಚೆ ಮಾಡಲಿಂ ಒಂದು ಮೀಟಿಂಗ್ ಕರೆದಿದ್ದೇನೆ. ದಯವಮಾಡಿ ಎರಡೂಕಡೆಯ ಸದಸ್ಯರು ಬರಬಹುದು.

ಶ್ರೀ ಕೆ.ಪಿಜಿ. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಭಾನಾಯಕರು ಒಪ್ಪಿಕೊಂಡಿದ್ದಾರೆ. ತಾವು ಈಗಲೇ ಮೀಟಿಂಗ್ ಕರೆಯಬಹುದಿತ್ತು. ತಾವು ತಮ್ಮ ಜವಾಬ್ದಾರಿಯಿಂದ ನುಣಿಚಿ ಕೊಳ್ಳುತ್ತಿದ್ದೀರಿ. ಈಗಲೇ ತಾವು ಮೀಟಿಂಗ್ ಕರೆದು ಮಾತುಕತೆ ಮಾಡಿ ಮುಗಿಸಬಹುದಿತ್ತು.

ಅಧ್ಯಕ್ಷರು.—ಈಗ ಮೂರುಮರೆ ಗಂಟೆಗೆ ಸ್ಪೀಕರ್ ಟೀ ಎಂದು ಮಾಡಿದ್ದೇವೆ. ಆಗ ಕುಳಿತು ಕೊಂಡರಾ ಮಾತನಾಡಿ. ಸಮಸ್ಯೆ ಇತ್ಯರ್ಥವಾದರೆ ಎಲ್ಲರಿಗೂ ಸಂತೋಷ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಪದೇ ಪದೇ ಈ ರೀತಿಯ ಅಭಿಪ್ರಾಯವನ್ನು ಸದನದಲ್ಲಿ ವ್ಯಕ್ತಪಡಿಸುತ್ತಿದ್ದಾರೆ. ನಾವು ಈ ವಿಷಯದ ಪ್ರಾಮುಖ್ಯತೆಯನ್ನು ಆರಿತು ನಿಯಮಾವಳಿಗಳ ಪ್ರಕಾರ ಪ್ರಸ್ತಾಪ ಮಾಡುತ್ತಿದ್ದೇವೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಒಂದು ಗಂಟೆಯಾಯಿತು, ಎರಡು ಗಂಟೆಯಾಯಿತು. ಸಮಯ ಹಾಳು ಮಾಡುತ್ತಿದ್ದೀರಿ, ಸಮಯ ವೇರ್ಸ್ಟ್ ಮಾಡುತ್ತಿದ್ದೀರಿ ಎಂದು ಪದೇ ಪದೇ ಹೇಳುತ್ತಿದ್ದಾರೆ. ನಾವು ಮಾಡುತ್ತಿರುವ ಕೆಲಸ ಪ್ರಜಾಪ್ರಭುತ್ವಕ್ಕೆ ಅನಿವಾರ್ಯವಾಗಿದೆ. ನಮ್ಮ ಜವಾಬ್ದಾರಿಯನ್ನು ನಾವು ನಿರ್ವಹಣೆ ಮಾಡುತ್ತಿದ್ದೇವೆ. ಆದರೂ ಕೂಡ ಮಾನ್ಯ ಮುಖ್ಯಮಂತ್ರಿಗಳು ಪದೇ ಪದೇ ಈ ರೀತಿ ಹೇಳಿದರೆ ಇದು ಒಂದು ಅರ್ಥದಲ್ಲಿ ಏನಾಗುತ್ತದೆ? ನಾವು ಸದನದ ಸಮಯವನ್ನು ವ್ಯಯ ಮಾಡುವ ಅಭಿಪ್ರಾಯದಲ್ಲಿ ನಿಲುವಳಿ ಸೂಚನೆಯನ್ನು ತರಲಿಲ್ಲ. ಆ ರೀತಿ ಹೇಳುವುದಾದರೆ ನಾವು ನಿಲುವಳಿ ಸೂಚನೆಯನ್ನು ಏತಕ್ಕೆ ಕಳುಹಿಸಿಕೊಡಬೇಕು? ನಾವು ಪ್ರಾಮುಖ್ಯವಾದ ವಿಷಯಗಳನ್ನು ಇಲ್ಲಿ ಚರ್ಚೆ ಏತಕ್ಕೆ ಮಾಡಬೇಕು? ಎಲ್ಲಾ ನೀವೆ ಮಾಡಿಕೊಂಡು ಹೋಗುವುದಾದರೆ ನಾವು ಏತಕ್ಕೆ ಇರಬೇಕು? ಪ್ರತಿಯೊಂದು ವಿಷಯದಲ್ಲೂ ಚರ್ಚೆಯನ್ನು ಮಾಡುವುದು ವಿರೋಧಪಕ್ಷದವರ ಪಕ್ಕ. ಇದನ್ನು ಮಾನ್ಯ ಮುಖ್ಯಮಂತ್ರಿಗಳು ಕಾಲವನ್ನು ವ್ಯಯ ಮಾಡುತ್ತಿದ್ದಾರೆಂದು ಹೇಳಬಾರದು. ಹಿಂದೆ ಇಂತಹ ಒಂದು ವಿಷಯ ಬಂದಾಗ ತಮ್ಮ ಮಂತ್ರಿಮಂಡಲದಲ್ಲಿರುವ ಮಾನ್ಯ ಲಕ್ಷ್ಮೀಸಾಗರ್‌ರವರು, ಬೊಮ್ಮಾಯಿಯವರು ಮಾನ್ಯ ದೇವೇಗೌಡರು ಈ ಬಗ್ಗೆ ಸದನದಲ್ಲಿ ಧರಣಿ ಸತ್ಯಾಗ್ರಹವನ್ನು ಮಾಡಿದ್ದಾರೆ. ಆಗ ಈ ಸದನದ ಸಮಯ ವ್ಯಯವಾಗಲಿಲ್ಲವೇ? ಅಂತಹವರನ್ನು ತಾವು ಇವತ್ತು ತಮ್ಮ ಮಂತ್ರಿಮಂಡಲದಲ್ಲಿ ಏತಕ್ಕೆ ಇಟ್ಟುಕೊಂಡಿದ್ದೀರಿ? ನಾವು ಏನಾದರೂ ವಿಷಯವನ್ನು ಪ್ರಸ್ತಾಪ ಮಾಡಿದಾಗ ಅದು ಅಷ್ಟೇ ಸೀರಿಯಸ್ಸ್ ಆಗಿ ಇರುತ್ತದೆ. ನಾವು ನಿಮ್ಮಂತೆ ಧರಣಿ ಸತ್ಯಾಗ್ರಹವನ್ನು ಇಲ್ಲಿ ಮಾಡುತ್ತಿಲ್ಲ. ಸಾರ್ವಜನಿಕರ ಪಂಪತ್ತುವಿರುವ ವಿಷಯವನ್ನು ನಾವು ಜವಾಬ್ದಾರಿಯಿಂದ ಇಲ್ಲಿ ಚರ್ಚೆ ಮಾಡುತ್ತಿದ್ದೇವೆ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಇನ್ನು ಮುಂದಾದರೂ ಆ ರೀತಿ ಹೇಳುವುದನ್ನು ಬಿಡಬೇಕು. ಜವಾಬ್ದಾರಿಯಿಂದ ನಾವು ನಮ್ಮ ಕರ್ತವ್ಯವನ್ನು ಮಾಡುತ್ತಿದ್ದೇವೆ. ವಿಷಯ ಸಲಹೆಯ ರೂಪದಲ್ಲಿ ಬಂದಾಗ ಸಲಹೆ ಮಾಡಬೇಕಾಗಂತ್ತದೆ. ಸಲಹೆ ಮಾಡುವುದಕ್ಕಾಗಿ ನಮ್ಮನ್ನು ಕರೆದಿದ್ದೀರಿ. ಆಗ ಸಲಹೆ ಮಾಡೋಣ. ಆದು ಬಿಟ್ಟು ಮಾನ್ಯ ಮುಖ್ಯಮಂತ್ರಿಗಳು ಈ ರೀತಿ ಹೇಳಿದರೆ ನಾವು ನಮ್ಮ ವಿಚಾರವನ್ನು ಹೇಳಬೇಕಾಗುತ್ತದೆ .....

ಅಧ್ಯಕ್ಷರು.—ವಿಷಯ ಒಂದು ಇತ್ಯರ್ಥಕ್ಕೆ ಬಂದಿದೆ .....

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಈ ವಿಷಯವನ್ನು ನಾವು ಸೀರಿಯಸ್ಸ್ ಆಗಿ ತೆಗೆದು ಕೊಂಡಿರುವುದರಿಂದ. There must be some limit for this.

(Interruptions)

It may be very light but to us it is very important matter.

ಅಧ್ಯಕ್ಷರು.—ವಿಷಯ ಇತ್ಯರ್ಥದ ಕೊನೆಗೆ ಬಂದಿದೆ.

ಶ್ರೀ ಎಸ್. ಬಂಗಾರಪ್ಪ.—ವಿಷಯ ಇತ್ಯರ್ಥದ ಕೊನೆಗಳಿಗೆಗೆ ಬಂದಿದೆ. ಆದರೂ ಕೂಡ ಮಾನ್ಯ ಮುಖ್ಯಮಂತ್ರಿಗಳು ಪದೇ ಪದೇ ಈ ರೀತಿ ಏತಕ್ಕೆ ಹೇಳಬೇಕು ? .....

(ಗೊಂದಲ)

ಅಧ್ಯಕ್ಷರು.— ತಾವು ಮಾತನಾಡುವುದಕ್ಕೆ ನಾನು ಅವಕಾಶ ಮಾಡಿಕೊಟ್ಟಿದ್ದೇನೆ. ತಾವು ಏನು ಹೇಳಬೇಕೋ ಅದನ್ನು ಹೇಳಿದ್ದೀರಿ. ಮಾನ್ಯ ಸಚಿವರು ಕೂಡ ತಮ್ಮ ಅಭಿಪ್ರಾಯವನ್ನು ತಿಳಿಸಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ ನಮ್ಮ ಅಭಿಪ್ರಾಯವನ್ನು ನಾವು ಹೇಳಿದ್ದೇವೆ...

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ನಾವು ಕೊಟ್ಟ ಅಭಿಪ್ರಾಯಗಳಿಗೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕಾಗುತ್ತದೆ .....

(ಗೊಂದಲ)

ಅಧ್ಯಕ್ಷರು.—ಈಗ ಇತ್ಯರ್ಥಕ್ಕೆ ಬಂದಿದೆ. ತಾವು ದಯವಾಡಿ ಕುಳಿತುಕೊಳ್ಳಿ.

ಶ್ರೀ ಎಸ್. ಬಂಗಾರಪ್ಪ.—ತಾವು ಮಾತನಾಡುವುದು ನಿಲ್ಲಿಸಿ ಎಂದು ಹೇಳಿದ್ದೀರಿ. ಆದರೆ ನಾವು ನಿಲ್ಲಿಸುತ್ತೇವೆ. ಮಾನ ಮುಖ್ಯಮಂತ್ರಿಗಳು ಹೇಳಿದ ವಿಷಯ ರೇಕಾರ್ಡ್‌ಗೆ ಹೋಗಿದೆ .....

(ಗೊಂದಲ)

ಅಧ್ಯಕ್ಷರು.—ತಾವು ದಯವಾಡಿ ಕುಳಿತುಕೊಳ್ಳಿ. ನಾನು ತಮಗೆ ಸಾಕಷ್ಟು ಅವಕಾಶ ಕೊಟ್ಟಿದ್ದೇನೆ. ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ವಿಷಯ ಈಗ ಕೊನೆಯ ಹಂತಕ್ಕೆ ಬಂದಿದೆ

(ಗೊಂದಲ)

ಅಧ್ಯಕ್ಷರು.—ದಯವಾಡಿ ಎರಡೂ ಕಡೆಯ ಸದಸ್ಯರು ಕುಳಿತುಕೊಳ್ಳಿ. ವಿಷಯ ಇತ್ಯರ್ಥದ ಕೊನೆಘಳಿಗೆಗೆ ಬಂದಿದೆ. ಮೂರುವರೆ ಗಂಟೆಗೆ ನನ್ನ ಕೊಠಡಿಯಲ್ಲಿ ಈ ಬಗ್ಗೆ ಚರ್ಚೆ ಮಾಡೋಣ. ಈಗ ಉಳಿದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳೋಣ.

ಶ್ರೀ ಎಸ್. ಬಂಗಾರಪ್ಪ.—ಉಳಿದ ಕಾರ್ಯಕ್ರಮಗಳನ್ನು ಸಹ ತೆಗೆದಂಕೊಳ್ಳೋಣ ಮಾನ್ಯ ಮುಖ್ಯಮಂತ್ರಿಗಳು ಈ ರೀತಿ ಪದೇ ಪದೇ ಹೇಳಿದರೆ ನಾವು ಈ ವಿಷಯವನ್ನೇ ಮತ್ತೆ ಪ್ರಸ್ತಾಪ ಮಾಡಬೇಕಾಗುತ್ತದೆ. ಇದನ್ನೇ ಮತ್ತೆ ಚರ್ಚೆ ಮಾಡಬೇಕಾಗುತ್ತದೆ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ತಾವು ಅವಕಾಶ ಮಾಡಿಕೊಟ್ಟಿದ್ದರಿಂದ ನಾವು ಆ ವಿಷಯವನ್ನು ಪ್ರಸ್ತಾಪ ಮಾಡಿದ್ದೇವೆ. ಆದರೆ ಮಾನ್ಯ ಮುಖ್ಯಮಂತ್ರಿಗಳು ಪ್ರಸ್ತಾಪ ಮಾಡಿ ಬೇಕಿ ಹೆಚ್ಚಿತಕ್ಕ ಕೆಲಸಕ್ಕೆ ಕೈ ಹಾಕಿದ್ದಾರೆ.

ಅಧ್ಯಕ್ಷರು.—ತಾವು ದಯವಾಡಿ ಕುಳಿತುಕೊಳ್ಳಿ. ನಾನು ತಮಗೆ ಸಾಕಷ್ಟು ಅವಕಾಶ ಮಾಡಿ ಕೊಟ್ಟಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ತಾವು ನನಗೆ ಅವಕಾಶ ಮಾಡಿಕೊಟ್ಟಿದ್ದೀರಿ ಅದಕ್ಕೆ ನಾನು ತಮಗೆ ವಂದನೆಗಳನ್ನು ಸಲ್ಲಿಸುತ್ತೇನೆ. ಆದರೆ ಮಾನ್ಯ ಮುಖ್ಯಮಂತ್ರಿಗಳು ಈ ರೀತಿ ಹೇಳುವುದನ್ನು ಇನ್ನು ಮುಂದಾದರೂ ಬಿಡಬೇಕು.

(ಗೊಂದಲ)

ಅಧ್ಯಕ್ಷರು.—ಮಾನ್ಯ ಶ್ರೀನಿವಾಸರಪರೇ, ತಾವು ಹೇಳಬೇಡಿ. ದಯಮಾಡಿ ಕುಳಿತುಕೊಳ್ಳಿ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ, ನಾವು ತಮಗೆ ಮನವಿಯನ್ನು ಸಲ್ಲಿಸಿ ...

(ಗೊಂದಲ)

(ಗೊಂದಲ)

ಅಧ್ಯಕ್ಷರು.—ಸಭೆ ನಡೆಸುವವನು ನಾನು, ತಾವು ದಯಮಾಡಿ ಕುಳಿತುಕೊಳ್ಳಿ. ನೀವೆಲ್ಲಾ ದೊಡ್ಡವರು. ದಯಮಾಡಿ ಕುಳಿತುಕೊಳ್ಳಿ. ಈಗ ಮಾತಿಗೆ ಅವಕಾಶ ಕೊಟ್ಟರೆ ಸರಿಹೋಗುವುದಿಲ್ಲ. ಯಾವ ಕಡೆಯವರೂ ಹೇಳುವುದು ಬೇಡ. ಇದರ ಬಗ್ಗೆ ನಿಮ್ಮ ಮುಖಂಡರು ಮಾನ್ಯ ಬಂಗಾರಪ್ಪನವರು ಹೇಳಿದ್ದಾರೆ. ಮಾನ್ಯ ವೊಯಿಲಿಯವರು ಹೇಳಿದ್ದಾರೆ, ಮಾನ್ಯ ಧರ್ಮಸಿಂಗ್‌ರವರು ಹೇಳಿದ್ದಾರೆ ಮತ್ತು ಮಾನ್ಯ ಕೆ. ಹೆಚ್. ಪಾಟೀಲರು ಹೇಳಿದ್ದಾರೆ.

ಶ್ರೀ ಪಿ. ರತ್ನಾಕರ್.—ಅವರು ಮನವಿ ಮಾಡುತ್ತಿದ್ದಾರೆ ಅಷ್ಟೆ. ಚರ್ಚೆ ಬೆಳೆಸುತ್ತಿಲ್ಲ.

ಅಧ್ಯಕ್ಷರು.—ಯಾವ ಕಡೆಯವರಿಗೂ ಅವಕಾಶ ಕೊಡುವುದಿಲ್ಲ. ಈಗಾಗಲೇ ಸಾಕಷ್ಟು ಕೇಳಿದ್ದೇನೆ. ದಯವಿಟ್ಟು ನನ್ನ ಮಾತನ್ನು ಕೇಳಿ, ಎಲ್ಲರೂ ಕುಳಿತುಕೊಳ್ಳಿ. ಈಗಾಗಲೇ ಎರಡೂ ಕಡೆಯ ಮುಖಂಡರೂ ಹೇಳಿದ್ದಾರೆ. ಹಾಗೆ ಮಾತನಾಡುವುದು ಇದ್ದರೆ, ಅವರ ಕಡೆಯವರಾಗಲೀ. ನಿಮ್ಮ ಕಡೆಯವರಾಗಲೀ ಮಾತನಾಡುವುದು ಇದ್ದರೆ, ಆಗ ಮಾತನಾಡೋಣ. ಇಲ್ಲಿ ಚರ್ಚೆ ಇನ್ನು ಸಾಕು. ಎರಡು ಕಡೆಯವರು ಹೇಳಿದ್ದನ್ನೂ ಕೇಳಿದ್ದೇನೆ. ಮಾನ್ಯ ಸಚಿವರ್ ಸಾಹೇಬರು ನಿಮ್ಮ ಜೊತೆಯಲ್ಲಿ ಕೂತು ಚರ್ಚೆ ಮಾಡೋಣ ಎಂದು ಒಪ್ಪಿದ್ದಾರೆ. ಇದರ ಬಗ್ಗೆ ಇನ್ನೂ ಆರ್ಡರ್ ಇಷ್ಯೂ ಮಾಡುವ ಪಂತದಲ್ಲಿ ಇಲ್ಲ ಎಂದು ಹೇಳಿದ್ದಾರೆ. ಈ ವಿಷಯ ಬಹಳ ಮಹತ್ವವಾದುದು ಇದೆ. ಇದರ ಬಗ್ಗೆ ವಿಚಾರ ಮಾಡೋಣ. ಮತ್ತೆ ಅವಕಾಶ ಬೇಕಾದರೆ ೬೮ನೇ ನಿಯಮದ ಪ್ರಕಾರ, ೧೫೮ನೇ ನಿಯಮದ ಪ್ರಕಾರ. ಅಥವಾ ೭೨ನೇ ನಿಯಮದ ಪ್ರಕಾರ ಮಾಡಿಕೊಡೋಣ. ಈಗ ಮುಂದಿನ ಚರ್ಚೆಗೆ ಹೋಗೋಣ. ಆದುದರಿಂದ ಈಗ ಈ ನಿಲುವಳಿ ಸೂಚನೆಗೆ ನನ್ನ ಅನುಮತಿಯನ್ನು ನಿರಾಕರಣೆ ಮಾಡಿರುತ್ತೇನೆ. ಈಗ ಕಾಲಿಂಗ್ ಅಟೆನ್‌ಷನ್ ತೆಗೆದುಕೊಳ್ಳೋಣ.

ಗಮನ ಸೆಳೆಯುವ ಸೂಚನೆಗಳು

ಗುಲ್ಬರ್ಗ ನಗರದ ಜನತೆಗೆ ಕುಡಿಯುವ ನೀರು ಸರಬರಾಜು ಮಾಡಲು ತೆಗೆದುಕೊಂಡಿರುವ ಕ್ರಮಗಳು

ಶ್ರೀ ಎಸ್. ಕೆ. ಕಾಂತಾ (ಗುಲಬರ್ಗಾ).—ಮಾನ್ಯ ಅಧ್ಯಕ್ಷರೇ. ಗುಲಬರ್ಗಾ ನಗರದ ಜನತೆಗೆ ಕುಡಿಯುವ ನೀರು ಸರಬರಾಜು ಮಾಡಲು ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಮಾನ್ಯ ನಗರಾಭಿವೃದ್ಧಿ ಸಚಿವರ ಗಮನವನ್ನು ಸೆಳೆಯುತ್ತೇನೆ. ಈ ಕಾಲಿಂಗ್ ಅಟೆನ್‌ಷನ್‌ಗೆ ಉತ್ತರ ನನಗೆ ಬಂದಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ನಗರಾಡಳಿತ ಸಚಿವರು).—ಉತ್ತರ ಕೊಡುತ್ತೇನೆ ಸ್ವಾಮಿ.

ಅಧ್ಯಕ್ಷರು.—ದಯವಿಟ್ಟು ಇನ್ನು ಮುಂದೆ ಮೊದಲೇ ಉತ್ತರಗಳನ್ನು ಕಳುಹಿಸಿಕೊಡಿ. ಇದನ್ನು ಪ್ರತಿದಿವಸ ಹೇಳುವುದು ಎಂದರೆ ಏನು ? ಕಾಲಿಂಗ್ ಅಟೆನ್‌ಷನ್ ಇದ್ದಾಗ ಮೊದಲೇ ಉತ್ತರ ಕಳುಹಿಸಿಕೊಡಬೇಕು.

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಸಚಿವರು).—ಸನ್ಮಾನ್ಯ ಅಧ್ಯಕ್ಷರೇ, ಗುಲಬರ್ಗಾ ನಗರದ ಜನತೆಗೆ ಕುಡಿಯುವ ನೀರು ಸರಬರಾಜು ಮಾಡಲು ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಮಾನ್ಯ ಸದಸ್ಯರಾದ ಶ್ರೀ ಎಸ್.ಕೆ. ಕಾಂತಾ ಅವರು ನೀಡಿರುವ ಗಮನ ಸೆಳೆಯುವ ಸೂಚನೆಯ ಬಗ್ಗೆ ಈ ಹೇಳಿಕೆಯನ್ನು ನೀಡಲು ಇಚ್ಛಿಸುತ್ತೇನೆ.